ಸೋಮವಾರ 01.12.2025
ಬೆಂಗಳೂರು, ಬೆಲೆ: 5ರೂ,
2 ಪುಟಗಳು
ಸಂಪುಟ 01 - ಸಂಚಿಕೆ 112
Digital Varthe Kannada Daily
Volume 01 - Issue 112
Monday 01.12.2025
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡ ದಿನಪತ್ರಿಕೆ
ಕನ್ನಡಿಗರ ಶಕ್ತಿ

DIGITAL VARTHE
digitalvarthe@gmail.com
www.digitalvarthe.com

## ಲೈಂಗಿಕ ಕಿರುಕುಳಕ್ಕೆ ಬೇಸತ್ತು ಆಶಿಕಾ ರಂಗನಾಥ್ ಸಂಬಂಧಿ ಆತ್ಮಹತ್ಯೆ



**ಬೆಂಗಳೂರು:** ಕನ್ನಡ ಚಿತ್ರರಂಗದ ಖ್ಯಾತ ನಟಿ ಆಶಿಕಾ ರಂಗನಾಥ್ ಅವರ ಮಾವನ ಮಗಳು, 22 ವರ್ಷದ ಅಚಲ ಎಂಬ ಯುವತಿ ಲೈಂಗಿಕ ಕಿರುಕುಳ ಮತ್ತು ಮಾನಸಿಕ ಒತ್ತಡಕ್ಕೆ ತುತ್ತಾಗಿ ನವೆಂಬರ್ 22ರಂದು ಬೆಂಗಳೂರಿನಲ್ಲಿದ್ದ ಅವರ ಮಾವನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾಸನ ಜಿಲ್ಲೆ ಮೂಲದ ಅಚಲ ಎಂಬ ಯುವತಿ ಇತ್ತೀಚೆಗೆ ಎಂಜಿನಿಯರಿಂಗ್ ಪದವಿ ಪೂರೈಸಿ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಲು ತಯಾರಿ ನಡೆಸುತ್ತಿದ್ದಳು. ಈ ಅವಧಿಯಲ್ಲಿ ತನ್ನ ದೂರದ ಸಂಬಂಧಿ ಮಯಾಂಕ್ ಜೊತೆ ಸ್ನೇಹ ಬೆಳೆಸಿಕೊಂಡಿದ್ದಳು ಆದರೆ ಈ ಸ್ನೇಹವೇ ಆಕೆಯ ಜೀವಕ್ಕೆ ಅಪಾಯವೊಡ್ಡಿದೆ.

ಈ ಬಗ್ಗೆ ಮಾತನಾಡಿದ ಅಚಲ ತಾಯಿ, ಮಯಾಂಕ್ ಮೊದಲು ಪ್ರೀತಿಯಿಂದ, ಸ್ನೇಹಿತನಂತೆ ವರ್ತಿಸುತ್ತಿದ್ದ, ನಂತರ ದೈಹಿಕ ಸಂಪರ್ಕಕ್ಕೆ ಒತ್ತಾಯ ಮಾಡತೊಡಗಿದ. ನಮ್ಮ ಮಗಳು ಒಪ್ಪದಿದ್ದಾಗ ಡ್ರಗ್ಸ್ ಸೇವಿಸಿ ಬಂದು ದೈಹಿಕ ಹಲ್ಲೆ ಮಾಡಿ, ಮಾನಸಿಕ ಚಿತ್ರಹಿಂಸೆ ಕೊಡ್ತಿದ್ದ. ಹಗಲು-ರಾತ್ರಿ ಫೋನ್ ಮಾಡಿ, ಮೆಸೇಜ್ ಮಾಡಿ, ಬೆದರಿಕೆ ಹಾಕ್ತಿದ್ದ. ಇದೆಲ್ಲಕ್ಕೂ ಬೇಸತ್ತು ಬೇಜಾರಾದ ಮಗಳು ನವೆಂಬರ್ 22ರಂದು ಪಾಂಡುರಂಗ ನಗರದಲ್ಲಿರುವ ನಮ್ಮ ಸಂಬಂಧಿಕರ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು ಎಂದು ಹೇಳಿದ್ದಾರೆ. ಅಚಲ ಮೃತದೇಹ ಪತ್ತೆಯಾದ ತಕ್ಷಣ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಅಸ್ವಾಭಾವಿಕ ಮರಣ ಪ್ರಕರಣ ದಾಖಲಾಗಿತ್ತು. ಆದರೆ ಮಗಳು ಬಿಟ್ಟು ಹೋದ ಮೊಬೈಲ್‌ನಲ್ಲಿ ಸಾವಿರಾರು ಕರೆಗಳು, ಧಮಕಿ ಮೆಸೇಜ್‌ಗಳು, ದೈಹಿಕ ಸಂಪರ್ಕಕ್ಕೆ ಒತ್ತಾಯಿಸಿದ ಚಾಟ್‌ಗಳು ಸಿಕ್ಕಿದ ಬಳಿಕ ಕುಟುಂಬಸ್ಥರು ಹಾಸನ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪ್ರಕರಣದಲ್ಲಿ ಐಪಿಸಿ ಸೆಕ್ಷನ್ 306 (ಆತ್ಮಹತ್ಯೆಗೆ ಪ್ರೇರೇಪಣೆ), 354A (ಲೈಂಗಿಕ ಕಿರುಕುಳ), 506 (ಕ್ರಿಮಿನಲ್ ಬೆದರಿಕೆ) ಈ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಆದರೆ ಘಟನೆ ನಡೆದು ಸುಮಾರು 10 ದಿನ ಕಳೆದರೂ ಆರೋಪಿ ಮಯಾಂಕ್ ಮತ್ತು ಅವನ ತಾಯಿ ಮೈನಾ ಇಬ್ಬರೂ ತಲೆಮರೆಸಿಕೊಂಡಿದ್ದಾರೆ ಎನ್ನಲಾಗಿದೆ. ಈ ವಿಳಂಬಕ್ಕೆ ಅಚಲ ಪೋಷಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ನಮ್ಮ ಮಗಳ ಜೀವ ತೆಗೆದವರನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆ ವಿಧಿಸಿ ಎಂದು ಒತ್ತಾಯಿಸಿದ್ದಾರೆ.

ನಟಿ ಆಶಿಕಾ ರಂಗನಾಥ್ ಇದುವರೆಗೆ ಈ ಘಟನೆ ಬಗ್ಗೆ ಸಾರ್ವಜನಿಕವಾಗಿ ಪ್ರತಿಕ್ರಿಯಿಸಿಲ್ಲ. ಆದರೆ ಕುಟುಂಬದಲ್ಲಿ ಆಘಾತ ಮತ್ತು ದುಃಖದ ವಾತಾವರಣವಿದೆ ಎನ್ನಲಾಗಿದೆ. ಯುವತಿಯರ ಮೇಲಿನ ಲೈಂಗಿಕ ಕಿರುಕುಳ ಮತ್ತು ಡ್ರಗ್ ದುರ್ಬಳಕೆಯ ಸಮಸ್ಯೆ ರಾಜ್ಯದಲ್ಲಿ ದಿನೇ ದಿನೇ ಗಂಭೀರವಾಗುತ್ತಿರುವ ಬೆನ್ನಲ್ಲೇ ಈ ದುರಂತ ಸಂಭವಿಸಿರುವುದು ಸಮಾಜಕ್ಕೆ ಆತಂಕ ಮೂಡಿಸಿದೆ.

## ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ, ನಿವೃತ್ತ ಡಿವೈಎಸ್‌ಪಿ ಆತ್ಮಹತ್ಯೆ



**ದಾವಣಗೆರೆ:** ನಿವೃತ್ತ ಡಿಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ (ಡಿವೈಎಸ್ಪಿ) ಹನುಮಂತಪ್ಪ ಹೆಚ್.ವೈ ತುರಾಯ್ (70) ಅವರು ದಾವಣಗೆರೆಯಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಅವರು ಮನೆಯಲ್ಲಿ ಒಬ್ಬರೇ ಇದ್ದ ಸಮಯದಲ್ಲಿ ಈ ಆತ್ಮಹತ್ಯೆಗೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

**ಘಟನೆಯ ವಿವರ**

ನಿವೃತ್ತ ಡಿವೈಎಸ್‌ಪಿ ಹನುಮಂತಪ್ಪ ಅವರು ದಾವಣಗೆರೆಯ ತಮ್ಮ ನಿವಾಸದಲ್ಲಿ ಶನಿವಾರ ಬ್ಯಾರೆಲ್ ಗನ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನೆಯ ಸಮಯದಲ್ಲಿ ಅವರು ಮನೆಯಲ್ಲಿ ಒಬ್ಬರೇ ಇದ್ದುದು ತಿಳಿದುಬಂದಿದೆ. ಕುಟುಂಬದ ಸದಸ್ಯರು ಮನೆಗೆ ಮರಳಿದಾಗ ಈ ಘಟನೆ ಬೆಳಕಿಗೆ ಬಂದಿದೆ.

**ಪೋಲಿಸ್ ತನಿಖೆ**

ಘಟನೆಯ ಸ್ಥಳಕ್ಕೆ ಕೆಟಿಜೆ ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶಿಲನೆ ನಡೆಸಿದ್ದಾರೆ. ಇವರ ಜೊತೆಗೆ ಘಟನಾ ಸ್ಥಳಕ್ಕೆ ವಿಧಿವಿಜ್ಞಾನ ತಂಡವು ಸಹ ಭೇಟಿ ನೀಡಿ ಮೃತ ದೇಹ ಮತ್ತು ಸ್ಥಲ ಪರಿಶೀಲನೆ ನಡೆಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಇದು ಆತ್ಮಹತ್ಯೆ ಎಂದು ಕಂಡರೂ, ಇದಕ್ಕೆ ಬೇರೇನಾದರೂ ಕಾರಣ ಇರಬಹುದೇ ಎಂದು ತನಿಖೆ ಮಾಡುತ್ತಿದ್ದಾರೆ.

**ಹನುಮಂತಪ್ಪ ಅವರ ವೃತ್ತಿ ಜೀವನ**

ಹನುಮಂತಪ್ಪ ಅವರು 2014ರಲ್ಲಿ ವಿಜಯನಗರ ಜಿಲ್ಲೆಯ ಕೂಡ್ಲಿಗಿಯಿಂದ ನಿವೃತ್ತಿ ಹೊಂದಿದ್ದರು. ನಿವೃತ್ತಿಯ ನಂತರ ಅವರು ದಾವಣಗೆರೆಗೆ ಬಂದು ನೆಲೆಸಿದ್ದರು. ಪೋಲೀಸ್ ಇಲಾಖೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಹನುಮಂತಪ್ಪ ಅವರು ತಮ್ಮ ವೃತ್ತಿ ಜೀವನದಲ್ಲಿ ಅನೇಕ ಮಹತ್ವದ ಕೆಲಸಗಳಲ್ಲಿ ಕಾರ್ಯನಿರ್ವಹಿಸಿದ್ದರು.

**ಮಾನಸಿಕ ಆರೋಗ್ಯ ಸಮಸ್ಯೆ**

ಆಪ್ತ ವಲಯ ತಿಳಿಸಿದಂತೆ, ಹನುಮಂತಪ್ಪ ಕೆಲವು ದಿನಗಳಿಂದ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದರು. ನಿವೃತ್ತಿ ನಂತರದ ಜೀವನ ಮತ್ತು ಇತರ ವೈಯಕ್ತಿಕ ಸಮಸ್ಯೆಗಳು ಅವರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಿದ್ದವು. ಅವರು ನಿಯಮಿತವಾಗಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದರೂ, ಈ ರೀತಿ ಆತ್ಮಹತ್ಯೆ ಮಾಡಿಕೊಂಡಿರುವುದಕ್ಕೆ ಕುಟುಂಬಸ್ಥರು ಬೇಸರ ವ್ಯಕ್ತಪಡಿಸಿದ್ದಾರೆ. ಈ ಘಟನೆಯಿಂದ ಮಾನಸಿಕ ಆರೋಗ್ಯ ಹೆಚ್ಚು ಅವಶ್ಯಕ ಎಂದು ಹೇಳಲು ಮತ್ತೊಂದು ಉದಾಹರಣೆಯಾಗಿದೆ. ಬಗ್ಗೆ ಸಾರ್ವಜನಿಕ ಅರಿವಿನ ಅಗತ್ಯವನ್ನು ಎತ್ತಿ ತೋರಿಸಿದೆ. ವೃತ್ತಿ ಜೀವನದ ಒತ್ತಡ ಮತ್ತು ನಿವೃತ್ತಿ ನಂತರದ ಸವಾಲುಗಳನ್ನು ನಿಭಾಯಿಸಲು ಮಾನಸಿಕ ಆರೋಗ್ಯ ಸಹಾಯಕಾರಿಯಾಗಬಹುದು. ಮಾನಸಿಕ ಆರೋಗ್ಯ ತಜ್ಞರು ನಿವೃತ್ತಿ ಅವಧಿಯಲ್ಲಿ ವೃತ್ತಿಪರ ಸಹಾಯ ಪಡೆಯುವ ಅಗತ್ಯವನ್ನು ಒತ್ತಿ ಹೇಳುತ್ತಾರೆ.

## 8 ಪುಟಗಳ 'ಡೆತ್ ನೋಟ್' ಬರೆದು ವಿದ್ಯಾರ್ಥಿನಿ ಆತ್ಮಹತ್ಯೆ

**ಬೆಂಗಳೂರು:** ಹೆಸರುಘಟ್ಟ ರಸ್ತೆ ಬಳಿಯ ಸೋಲದೇವನಹಳ್ಳಿಯಲ್ಲಿ ಒಂದು ಖಾಸಗಿ ಪಿಜಿಯಲ್ಲಿ ಅಂತಿಮ ವರ್ಷದ ಬಿ.ಫಾರ್ಮ್ ವಿದ್ಯಾರ್ಥಿನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಸನ ಜಿಲ್ಲೆಯ ಮೂಲದ ವತ್ಸಲಾ (19) ಎಂಬ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ವತ್ಸಲಾ ಬೆಂಗಳೂರಿನ ಒಂದು ಖಾಸಗಿ ಕಾಲೇಜಲ್ಲಿ ಬಿ. ಫಾರ್ಮ್ ಫೈನಲ್ ಇಯರ್ ಪದವಿ ವಿದ್ಯಾರ್ಥಿನಿಯಾಗಿದ್ದರು. ಉನ್ನತ ವಿದ್ಯಾಭ್ಯಾಸದ ಸಲುವಾಗಿ ಹಾಸನದಿಂದ ಬೆಂಗಳೂರಿಗೆ ಬಂದು, ಸೋಲದೇವನಹಳ್ಳಿಯ ಒಂದು ಪಿಜಿಯಲ್ಲಿ ವಾಸವಿದ್ದರು. ಭಾನುವಾರ ಬೆಳಿಗ್ಗೆಯಿಂದ ವತ್ಸಲಾ ತನ್ನ ರೂಮ್ ಬಾಗಿಲನ್ನ ತೆಗಿದಿರಲ್ಲಿಲ್ಲ. ಮಧ್ಯಾಹ್ನ 2:30 ಗಂಟೆ ಸುಮಾರಿಗೆ, ಪಿಜಿ ಸಿಬ್ಬಂದಿ ಕೊಠಡಿಯ ಬಾಗಿಲು ಹೊರಗಿಂದ ಲಾಕ್ ಆಗಿದ್ದನ್ನ ಗಮನಿಸಿ, ಆತಂಕಗೊಂಡು ಬಾಗಿಲನ್ನ ಒಡೆದುತೆಗೆದರು.

ಬಾಗಿಲನ್ನು ತೆರೆದಾಗ, ವತ್ಸಲಾ ಫ್ಯಾನ್‌ಗೆ ನೇಣು ಬಿಗಿದುಕೊಂಡು ಪ್ರಾಣಬಿಟ್ಟಿದ್ದಳು. ಘಟನೆಯಿಂದ ಆತಂಕಗೊಂಡ ಪಿಜಿ ಸಿಬ್ಬಂದಿ ತಕ್ಷಣ ಸೋಲದೇವನಹಳ್ಳಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿದರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶಿಲನೆ ನೆಸಿದರು. ಆ ವೇಳೆ, ವತ್ಸಲಾ 8 ಪುಟಗಳ ಉದ್ದನೆಯ 'ಡೆತ್ ನೋಟ್' ಪತ್ತೆಯಾಗಿದೆ.

ಡೆತ್ ನೋಟ್‌ನಲ್ಲಿ ನಾನು ನಿಮ್ಮ ಪ್ರೀತಿಗೆ ಅರ್ಹಳಲ್ಲ ಅಪ್ಪ. ನೀವು ಕೊಟ್ಟಿರುವ ಪ್ರೀತಿ ಇನ್ಯಾರಿಂದಲೂ ಕೊಡಲು ಸಾಧ್ಯವಿಲ್ಲ. ಕೇಳಿದ್ದನ್ನೆಲ್ಲಾ ಕೊಡಿಸಿದ್ದೀರಿ. ಅಪ್ಪ ನಿಮ್ಮ ಮರ್ಯಾದೆ ತೆಗೆಯುವ ಕೆಲಸ ನಾನು ಮಾಡಿಲ್ಲ. ಅಪ್ಪ ನಿಮ್ಮ ಪ್ರೀತಿ ಉಳಿಸಿಕೊಳ್ಳುವ ಭಾಗ್ಯ ನನಗಿಲ್ಲ ಎಂಬ ಸಾಲುಗಳೊಂದಿಗೆ ಪ್ರಾರಂಭಿಸಿ ನಾನು ಪ್ರೀತಿಸಿದ ಹುಡುಗನಿಗೂ ಮೋಸ ಮಾಡಲು ನನಗೆ ಇಷ್ಟವಾಗುತ್ತಿಲ್ಲ. ಹೀಗಾಗಿ ನಾನು ಸಾವಿಗೆ ಶರಣಾಗುತ್ತಿದ್ದೇನೆ ಎಂದು 8 ಪುಟಗಳ ಡೆತ್ ನೋಟ್ ಬರೆದಿಟ್ಟು ಮದ್ಯಾಹ್ನ 2:30ಕ್ಕೆ ಫ್ಯಾನ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ನಾನು ಪ್ರೀತಿಸಿದ ಹುಡುಗನಿಗೂ ಮೋಸ ಮಾಡಲು ನನಗೆ ಇಷ್ಟವಾಗುತ್ತಿಲ್ಲ. ಹೀಗಾಗಿ ನಾನು ಸಾವಿಗೆ ಶರಣಾಗುತ್ತಿದ್ದೇನೆ ಎಂದು ಅವರು ಬರೆದಿರುವುದು, ವೈಯಕ್ತಿಕ ಸಂಬಂಧಗಳಿಂದ ಉಂಟಾದ ಮಾನಸಿಕ ಒತ್ತಡದಿಂದ ವಿದ್ಯಾರ್ಥಿನಿ ನೇಣಿಗೆ ಶರಣಾಗಿದ್ದಾಳೆಯೇ..? ಎಂಬ ಅನುಮಾನ ಸೃಷ್ಟಿಸಿದೆ.

ಸೋಲದೇವ ನಹಳ್ಳಿ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಯುಡಿಆರ್ ಪ್ರಕರಣ ದಾಖಲಾಗಿದೆ. ಪೊಲೀಸರು ಡೆತ್ ನೋಟ್ ಅನ್ನು ವಶಪಡಿಸಿಕೊಂಡಿದ್ದಾರೆ. ಇನ್ನೂ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ. ತನಿಖೆಯ ಅಧಿಕಾರಿಗಳು ವಿದ್ಯಾರ್ಥಿನಿಯ ಕುಟುಂಬ, ಸ್ನೇಹಿತರು ಮತ್ತು ಕಾಲೇಜು ಸಿಬ್ಬಂದಿಗಳೊಂದಿಗೆ ಮಾತನಾಡಿ ಘಟನೆಯ ಹಿನ್ನೆಲೆ ಮತ್ತು ಕಾರಣಗಳನ್ನು ತನಿಖೆ ಮಾಡುತ್ತಿದ್ದಾರೆ.

## ಬುದ್ದಿವಾದ ಹೇಳಿದ್ದಕ್ಕೆ ಮನನೊಂದು ಎಂಜಿನಿಯರಿಂಗ್ ವಿದ್ಯಾರ್ಥಿನಿ ಸೂಸೈಡ್



**ಗದಗ:** ಚೆನ್ನಾಗಿ ಓದು, ಕಾಲೇಜು ಬಿಡಬೇಡ, ಎಲ್ಲಂದೆರಲ್ಲಿ ಟೂರ್ ಹೋಗಬೇಡ ಎಂದು ಮನೆಯಲ್ಲಿ ಬುದ್ಧಿಮಾತು ಹೇಳಿದ್ದಕ್ಕೆ ಮನನೊಂದು ಎಂಜಿನಿಯರಿಂಗ್ ವಿದ್ಯಾರ್ಥಿನಿ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆ ಗದಗ (Gadag) ನಗರದ ಭೀಷ್ಮ ಕೆರೆಯಲ್ಲಿ ನಡೆದಿದೆ. ನಗರದ ಹೃದಯ ಭಾಗದಲ್ಲಿರುವ ಭೀಷ್ಮ ಕೆರೆಯಲ್ಲಿ ಮುಳುಗಿ ಚಂದ್ರಿಕಾ (21) ನಡುವಿನಮನಿ ಎಂಬ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಚಂದ್ರಿಕಾ ಗದಗ ನಗರದ ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಫೈನಲ್ ಇಯರ್ ವ್ಯಾಸಂಗ ಮಾಡುತ್ತಿದ್ದಳು ಚಂದ್ರಿಕಾ ಮೂಲತಃ ಬಾಗಲಕೋಟೆ ಜಿಲ್ಲೆಯ ಶಿರೂರು ಗ್ರಾಮದ ನಿವಾಸಿ. ನಗರದ ಸಂಭಾಪೂರ ರಸ್ತೆಯ ಲಕ್ಷ್ಮೀ ನಗರದಲ್ಲಿ ಬಾಡಿಗೆ ಮನೆಯಲ್ಲಿ ಗೆಳತಿಯರೊಂದಿಗೆ ವಾಸವಿದ್ದಳು. ಫ್ರೆಂಡ್ಸ್ ಜೊತೆ ಟೂರ್ ಹೋಗಿದ್ದಳು. ಈ ವಿಷಯ ಮನೆಯವರಿಗೆ ಗೊತ್ತಾಗಿದೆ. ಓದುವುದು, ಕಾಲೇಜು ಬಿಟ್ಟು ಮನೆಯಲ್ಲಿ ಹೇಳದೆ ಯಾಕೆ ಟೂರ್ ಹೋಗಿದ್ದಿಯಾ ಅಂತ ಬೈದು ಬುದ್ಧಿವಾದ ಹೇಳಿದ್ದಾರೆ. ಇದರಿಂದ ಮನನೊಂದ ಚಂದ್ರಿಕಾ ಶನಿವಾರ ರಾತ್ರಿ 1:30 ರ ಸುಮಾರಿಗೆ ಕೊಠಡಿಯಿಂದ ಹೊರಹೋಗಿ ಭೀಷ್ಮ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾಳೆ. ಇಂದು ಶವವಾಗಿ ಪತ್ತೆಯಾಗಿದೆ. ಚಂದ್ರಿಕಾ ಮೂಲತಃ ಬಾಗಲಕೋಟೆ ಜಿಲ್ಲೆಯ ಶಿರೂರು ಗ್ರಾಮದ ನಿವಾಸಿ. ನಗರದ ಸಂಭಾಪೂರ ರಸ್ತೆಯ ಲಕ್ಷ್ಮೀ ನಗರದಲ್ಲಿ ಬಾಡಿಗೆ ಮನೆಯಲ್ಲಿ ಗೆಳತಿಯರೊಂದಿಗೆ ವಾಸವಿದ್ದಳು. ಫ್ರೆಂಡ್ಸ್ ಜೊತೆ ಟೂರ್ ಹೋಗಿದ್ದಳು.

ಈ ವಿಷಯ ಮನೆಯವರಿಗೆ ಗೊತ್ತಾಗಿದೆ. ಓದುವುದು, ಕಾಲೇಜು ಬಿಟ್ಟು ಮನೆಯಲ್ಲಿ ಹೇಳದೆ ಯಾಕೆ ಟೂರ್ ಹೋಗಿದ್ದಿಯಾ ಅಂತ ಬೈದು ಬುದ್ಧಿವಾದ ಹೇಳಿದ್ದಾರೆ. ಇದರಿಂದ ಮನನೊಂದ ಚಂದ್ರಿಕಾ ಶನಿವಾರ ರಾತ್ರಿ 1:30 ರ ಸುಮಾರಿಗೆ ಕೊಠಡಿಯಿಂದ ಹೊರಹೋಗಿ ಭೀಷ್ಮ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾಳೆ. ಇಂದು ಶವವಾಗಿ ಪತ್ತೆಯಾಗಿದೆ.

## ಗುಂಡಿನ ದಾಳಿ: ಸ್ಥಳದಲ್ಲೇ ನಾಲ್ವರು ದುರ್ಮರಣ



**ಕ್ಯಾಲಿಫೋರ್ನಿಯಾ:** ಅಮೆರಿಕಾದ ಕ್ಯಾಲಿಫೋರ್ನಿಯಾ ರಾಜ್ಯದ ಸ್ಟಾಕ್ಟನ್ ನಗರದಲ್ಲಿ ಶನಿವಾರ ಸಂಜೆ ನಡೆದ ಮಗುವಿನ ಹುಟ್ಟುಹಬ್ಬದ ಪಾರ್ಟಿಯಲ್ಲಿ ಭಯಾನಕ ಗುಂಡಿನ ದಾಳಿ ನಡೆದಿದೆ. ಈ ದುರಂತಕ್ಕೆ ನಾಲ್ವರು ಸಾವನ್ನಪ್ಪಿದ್ದಾರೆ ಮತ್ತು 10 ಮಂದಿ ಗುಂಡೇಟಿಗೆ ಒಳಗಾಗಿ ಗಾಯಗೊಂಡಿದ್ದಾರೆ. ಬಲಿಯಾದವರಲ್ಲಿ ಮಕ್ಕಳು ಮತ್ತು ವಯಸ್ಕರೂ ಸೇರಿದ್ದಾರೆ ಎಂದು ಸ್ಯಾನ್ ಜೋಕ್ವಿನ್ ಕೌಂಟಿ ಶೆರಿಫ್ ಕಚೇರಿ ತಿಳಿಸಿದೆ.

ಘಟನೆ ಸ್ಟಾಕ್ಟನ್ ನಗರದ 1900 ಬ್ಲಾಕ್ ಲ್ಯೂಸಿಲ್ ಅವೆನ್ಯೂದಲ್ಲಿ ಇರುವ ಸ್ಟ್ರಿಪ್ ಮಾಲ್ ಶಾಪಿಂಗ್ ಸೆಂಟರ್‌ನಲ್ಲಿ ೀ ಘಟನೆ ನಡೆದಿದೆ. ಇಲ್ಲಿ ನಡೆಯುತ್ತಿದ್ದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಗುವಿನ ಹುಟ್ಟುಹಬ್ಬದ ಆಚರಣೆಯಲ್ಲಿ ಭಾಗವಹಿಸುತ್ತಿದ್ದ ಕುಟುಂಬಸ್ಥರು ಮತ್ತು ಸ್ನೇಹಿತರ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಸ್ಥಳೀಯ ಉಪ ಮೇಯರ್ ಜೇಸನ್ ಲೀ, "ಇದು ನನ್ನ ಹೃದಯವನ್ನು ಭಾರವಾಗಿಸಿದೆ. ನಮ್ಮ ಮಕ್ಕಳ ಹುಟ್ಟುಹಬ್ಬದಂತಹ ಸಂತೋಷದ ಕ್ಷಣಗಳಲ್ಲಿ ಇಂತಹ ಹಿಂಸೆ ನಡೆಯುವುದು ಅಮಾನುಷವಾಗಿದೆ" ಎಂದು ಭಾವುಕರಾಗಿ ಹೇಳಿದ್ದಾರೆ.

ಸ್ಯಾನ್ ಜೋಕ್ವಿನ್ ಕೌಂಟಿ ಶೆರಿಫ್ ಕಚೇರಿಯ ವಕ್ತಾರೆ ಹೀದರ್ ಬ್ರೆಂಟ್ ಘಟನಾ ಸ್ಥಳದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುತ್ತಾ, "ನಾಲ್ವರು ಬಲಿಯಾಗಿದ್ದಾರೆ ಮತ್ತು 14 ಮಂದಿ ಗಾಯಗೊಂಡಿದ್ದಾರೆ. ಬಲಿಯಾದವರಲ್ಲಿ ಮಕ್ಕಳು ಮತ್ತು ವಯಸ್ಕರು ಇಬ್ಬರೂ ಸೇರಿದ್ದಾರೆ. ಆರಂಭಿಕ ಸೂಚನೆಗಳು ಇದು ಉದ್ದೇಶಿತ ದಾಳಿಯಾಗಿರಬಹುದೆಂದು ಸೂಚಿಸುತ್ತವೆ ಎಂದು ತಿಳಿಸಿದ್ದಾರೆ. ಗುಂಡಿಗಾರರು ಯಾರು ಮತ್ತು ಅವರ ಉದ್ದೇಶವೇನು ಎಂಬುದನ್ನು ಇನ್ನೂ ಗುರುತಿಸಲಾಗಿಲ್ಲ. ಶೆರಿಫ್ ಕಚೇರಿ ಪತ್ತೆದಾರರು ತನಿಖೆಯನ್ನು ತೀವ್ರಗೊಳಿಸಿದ್ದಾರೆ.

ಘಟನೆ ನಡೆದ ಬಳಿಕ ಸ್ಥಳೀಯ ಪೊಲೀಸ್ ಮತ್ತು ಶೆರಿಫ್ ಡೆಪ್ಯೂಟಿಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ಆಸ್ಪತ್ರೆಗಳಿಗೆ ಕರೆದೊಯ್ಯಿಸಿದ್ದಾರೆ. ಕೆಲವರು ಗಂಭೀರ ಸ್ಥಿತಿಯಲ್ಲಿರುವುದರಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪೊಲೀಸ್ ಇಲಾಖೆಯು ಸಾರ್ವಜನಿಕರಿಗೆ ಘಟನಾ ಸ್ಥಳದಿಂದ ದೂರ ಉಳಿಯುವಂತೆ ಸೂಚಿಸಿದ್ದು, ಯಾವುದೇ ಮಾಹಿತಿ ಇದ್ದರೆ ಶೆರಿಫ್ ಕಚೇರಿಗೆ ಸಂಪರ್ಕಿಸಲು ಕೋರಿದ್ದಾರೆ.

## ದಿತ್ವಾ ಚಂಡಮಾರುತ ಎಫೆಕ್ಟ್: ಶ್ರೀಲಂಕಾದಲ್ಲಿ 132 ಮಂದಿ ಸಾ*ವು, ಹಲವರು ಮಿಸ್ಸಿಂಗ್



**ಕೊಲಂಬೊ:** ಬಂಗಾಳ ಕೊಲ್ಲಿಯಲ್ಲಿ ಉಗಮವಾದ 'ದಿತ್ವಾ' (Cyclone Ditwah) ಚಂಡಮಾರುತದಿಂದ ಶ್ರೀಲಂಕಾ ದ್ವೀಪರಾಷ್ಟ್ರ ತೀವ್ರ ತತ್ತರಿಸಿದೆ. ಭಾರಿ ಮಳೆ, ಪ್ರವಾಹ ಮತ್ತು ಭೂಕುಸಿತಗಳಿಂದ ಮೃತಪಟ್ಟವರ ಸಂಖ್ಯೆ 132ಕ್ಕೆ ಏರಿಕೆಯಾಗಿದ್ದು, 176 ಜನರು ಇನ್ನೂ ಕಾಣೆಯಾಗಿದ್ದಾರೆ ಎಂದು ಶ್ರೀಲಂಕಾ ವಿಪತ್ತು ನಿರ್ವಹಣಾ ಕೇಂದ್ರ (DMC) ತಿಳಿಸಿದೆ. 61,000 ಕುಟುಂಬಗಳ ಸುಮಾರು 2 ಲಕ್ಷಕ್ಕೂ ಹೆಚ್ಚು ಜನರು ಬಾಧಿತರಾಗಿದ್ದು, 78,000ಕ್ಕೂ ಹೆಚ್ಚು ಮಂದಿ ಸುರಕ್ಷಿತ ಆಶ್ರಯ ಕೇಂದ್ರಗಳಲ್ಲಿ ತಲುಪಿದ್ದಾರೆ. 15,000ಕ್ಕೂ ಹೆಚ್ಚು ಮನೆಗಳು ಸಂಪೂರ್ಣ ಅಥವಾ ಆಂಶಿಕವಾಗಿ ಹಾನಿಗೊಳಗಾಗಿವೆ. ರಸ್ತೆಗಳು, ಸೇತುವೆಗಳು, ವಿದ್ಯುತ್ ಗ್ರಿಡ್ ಮತ್ತು ಸಂವಹನ ವ್ಯವಸ್ಥೆಗಳಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದು, ದೇಶದ ಶೇ.35 ಭೂಪ್ರದೇಶದ ಜನರು ಶುಕ್ರವಾರದಿಂದ ವಿದ್ಯುತ್‌ರಹಿತವಾಗಿದ್ದಾರೆ.

ಈ ಕ್ಯಾಂಡಿ, ಬದುಲ್ಲಾ, ನುವಾರಾ ಎಲಿಯಾ, ರತ್ನಪುರ ಎಂಬ ಜಿಲ್ಲೆಗಳು ಅತಿ ಹೆಚ್ಚು ಪ್ರಭಾವಕ್ಕೀಡಾಗಿದೆ. ಚಂಡಮಾರುತ , ಶನಿವಾರ ಶ್ರೀಲಂಕಾ ಬಿಟ್ಟು ದಕ್ಷಿಣ ಭಾರತದ ಕರಾವಳಿಯತ್ತ ಸಾಗಿದೆ ಎಂದು ಹವಾಮಾನ ಇಲಾಖೆಯ ಮಹಾನಿರ್ದೇಶಕ ಅತುಲಾ ಕರುಣನಾಯಕೆ ತಿಳಿಸಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಇಂದು ಭರಿ ಮಳೆಯಾಘುದ ಸಾಧ್ಯತೆ ಇದೆ.

ವಾಯವ್ಯ ಪ್ರಾಂತ್ಯದ ಕಲಾಯೋಯ ಪ್ರದೇಶದಲ್ಲಿ ಪ್ರವಾಹದಲ್ಲಿ ಸಿಲುಕಿದ್ದ ಬಸ್‌ನ 68 ಪ್ರಯಾಣಿಕರನ್ನು ನೌಕಾಪಡೆ ಶನಿವಾರ ಮುಂಜಾನೆ ರಕ್ಷಿಸಿದೆ. ಬಸ್ ಸೇತುವೆ ಬಳಿ ಸಿಲುಕಿಕೊಂಡಿತ್ತು. ಪ್ರಯಾಣಿಕರು ಬಸ್‌ನ ಛಾವಣಿ ಮೇಲೆ ಸುಮಾರು 29 ಗಂಟೆಗಳ ಕಾಲ ಕಾಯುತ್ತಿದ್ದರು. ಬೋಟ್‌ಗಳು ಮತ್ತು ಹೆಲಿಕಾಪ್ಟರ್‌ಗಳ ಮೂಲಕ ದೀರ್ಘ ಕಾರ್ಯಾಚರಣೆ ನಡೆಸಿ ಅವರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಲಾಯಿತು. ಈ ಘಟನೆಗೆ ಸಂಬಂಧಪಟ್ಟಂತೆ, ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸನಾಯಕೆ, ದೇಶಾದ್ಯಂತ ತುರ್ತು ಪರಿಸ್ಥಿತಿ ಘೋಷಿಸಿದ್ದು, ಅಂತರರಾಷ್ಟ್ರೀಯ ನೆರವು ಕೋರಿದ್ದಾರೆ. 2017ರಲ್ಲಿ 200ಕ್ಕೂ ಹೆಚ್ಚು ಮಾಂದಿ ಮತ್ತು 2003ರಲ್ಲಿ 254 ಜನರು ಮೃತಪಟ್ಟಿದ್ದ ಪ್ರವಾಹಕ್ಕಿಂತ ಈ ಬಾರಿಯ ವಿನಾಶ ದೊಡ್ಡದು ಎಂದು ಅಧಿಕಾರಿಗಳು ಹೇಳಿದ್ದಾರೆ.

**ಭಾರತದ ಸಹಾಯ**

ನೆರೆ ರಾಷ್ಟ್ರ ಶ್ರೀಲಂಕಾಕ್ಕೆ ಭಾರತ ತಕ್ಷಣ ಸ್ಪಂದಿಸಿದ್ದು, 'ಆಪರೇಷನ್ ಸಾಗರ್ ಬಂಧು' ಅಡಿಯಲ್ಲಿ ಭಾರತೀಯ ವಾಯುಪಡೆ ಶನಿವಾರ 21 ಟನ್ ಪರಿಹಾರ ಸಾಮಗ್ರಿ, 80ಕ್ಕೂ ಹೆಚ್ಚು NDRF ಸಿಬ್ಬಂದಿ ಮತ್ತು 8 ಟನ್ ಉಪಕರಣಗಳನ್ನು ರವಾನಿಸಿದೆ. ಆಹಾರ ಪ್ಯಾಕೇಟ್‌ಗಳು, ಕಂಬಳಿ, ಔಷಧಿಗಳು, ತಾತ್ಕಾಲಿಕ ಆಶ್ರಯ ಕಿಟ್‌ಗಳು ಇದರಲ್ಲಿ ಸೇರಿವೆ.

**ತಮಿಳುನಾಡಿಗೂ ಭಾರಿ ಎಚ್ಚರಿಕೆ**

ಚಂಡಮಾರುತ ಶ್ರೀಲಂಕಾ ದಾಟಿ ಭಾನುವಾರ (ನವೆಂಬರ್ 30) ಮುಂಜಾನೆ ಉತ್ತರ ತಮಿಳುನಾಡು, ಪುದುಚೇರಿ ಮತ್ತು ದಕ್ಷಿಣ ಆಂಧ್ರಪ್ರದೇಶ ಕರಾವಳಿಯನ್ನು ಅಪ್ಪಳಿಸಲಿದೆ ಎಂದು IMD ಎಚ್ಚರಿಕೆ ನೀಡಿದೆ. ತಂಜಾವೂರು, ನಾಗಪಟ್ಟಣಂ, ಮೈಲಾಡುತುರೈ, ಕುಂಭಕೋಣಂ, ಪಾಪನಾಸಂ, ಕಡಲೂರು, ಚೆನ್ನೈನ ಕೆಲವು ಭಾಗಗಳಲ್ಲಿ ಭಾರಿ ಮಳೆ ಸುರಿದಿದೆ.

**ಭಾರತದಲ್ಲಿ ತೆಗೆದುಕೊಂಡಿರುವ ಕ್ರಮ**

54 ವಿಮಾನಗಳ ಹಾರಾಟ ರದ್ದು (ಚೆನ್ನೈ ವಿಮಾನ ನಿಲ್ದಾಣ)

ಮಳೆ ಬಾಧಿತ ಜಿಲ್ಲೆಗಳಲ್ಲಿ ಶನಿವಾರ ಶಾಲಾ-ಕಾಲೇಜುಗಳಿಗೆ ರಜೆ

ರಾಮನಾಥಪುರಂ ಜಿಲ್ಲೆಯಲ್ಲಿ ಹೊರಗೆ ಬರದಂತೆ ಎಚ್ಚರಿಕೆ

ಪಂಬನ್-ಧನುಷ್ಕೋಟಿ ಪ್ರವಾಸಿಗರಿಗೆ ನಿರ್ಬಂಧ

ಪುದುಚೇರಿ ಕೇಂದ್ರೀಯ ವಿಶ್ವವಿದ್ಯಾಲಯದ ಪರೀಕ್ಷೆಗಳು ಮುಂದೂಡಿಕೆ

ತಮಿಳುನಾಡು, ಪುದುಚೇರಿ, ದಕ್ಷಿಣ ಆಂಧ್ರ ಕರಾವಳಿ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಸೂಚನೆ

## ಮನೆ ಮುಂದೆ ಆಟವಾಡುತ್ತಿದ್ದ ಮಗುವಿಗೆ ಕಾರು ಡಿಕ್ಕಿ: ಪೋಷಕರಿಗೆ ಎಚ್ಚರಿಕೆ"



**ನೆಲಮಂಗಲ:** ಮನೆಯ ಆವರಣದಲ್ಲಿ ಅಥವಾ ರಸ್ತೆಗಳಲ್ಲಿ ಆಟವಾಡುವ ಮಕ್ಕಳ ಮೇಲೆ ವಾಹನ ಹರಿದ ಸಾಕಷ್ಟು ಘಟನೆಗಳು ಈ ಹಿಂದೆಯೂ ಬೆಳಕಿಗೆ ಬಂದಿದ್ದು, ಅಂಥದ್ದೇ ಭೀಕರ ಘಟನೆ ನೆಲಮಂಗಲದಲ್ಲೂ ನಡೆದಿದೆ. ಮನೆಯ ಮುಂದೆ ರಸ್ತೆ ಮೇಲೆ ಆಟವಾಡುತ್ತಿದ್ದ ಮಗುವಿನ ಮೇಲೆ ಕಾರು ಹರಿದ ಘಟನೆ ನೆಲಮಂಗಲದಲ್ಲಿ ನಡೆದಿದೆ. ಅದೃಷ್ಟವಶಾತ್ ಮಗು ಪ್ರಾಣಾಪಾಯದಿಂದ ಪಾರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದೆ. ನೆಲಮಂಗಲ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಸಿಸಿಟಿಯಲ್ಲಿ ಭಯಾನಕ ದೃಶ್ಯ ಸೆರೆ**

ನೆಲಮಂಗಲದ ಟಿ ಬಿ ಸ್ಟಾಪ್ ಬಳಿಯ ಸುಭಾಷ್ ನಗರದ ತಿರುವಿನಲ್ಲಿ ವೇಗವಾಗಿ ಬಂದ ಮಾರುತಿ ಎಟ್ರಿಕಾ ಕಾರು ನಿಯಂತ್ರಣ ತಪ್ಪಿ ಮನೆಯ ಮುಂದೆ ಆಟವಾಡುತ್ತಿದ್ದ ಮೂರು ವರ್ಷದ ದಕ್ಷಿತ್ ಎಂಬ ಮಗುವಿನ ಮೇಲೆ ಹರಿದಿದ್ದು, ಸಿಸಿಟಿವಿಯಲ್ಲಿ ಈ ಭಯಾನಕ ದೃಶ್ಯ ಸೆರೆಯಾಗಿದೆ. ಮಗುವಿನ ಚೀರಾಟ ಕೇಳಿದ ಮನೆಮಂದಿ ಮತ್ತು ನೆರೆಹೊರೆಯವರು ಕಂಗಾಲಾಗಿದ್ದು, ತಕ್ಷಣ ಸ್ಥಳಕ್ಕೆ ಧಾವಿಸಿ ಮಗುವನ್ನು ರಕ್ಷಿಸಿದ್ದಾರೆ.

ಚಾಲಕ ಬೇಜವಬ್ದಾರಿಯಿಂದ ಕಾರು ಚಲಾಯಿಸಿದ್ದೇ ಈ ಘಟನೆಗೆ ಕಾರಣ ಎಂಬ ಆರೋಪ ಕೇಳಿ ಬಂದಿದೆ. ದಕ್ಷಿತ್‌ನ ತಲೆ, ಮುಖ ಮತ್ತು ಬೆನ್ನಿನ ಭಾಗಕ್ಕೆ ಗಾಯಗಳಾಗಿರುವುದರಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಅಚ್ಚರಿಯೆಂಬಂತೆ ಮಗು ಸಾವಿನ ಅಂಚಿನಿಂದ ಪಾರಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಈ ಅಪಘಾತದ ಕುರಿತು ನೆಲಮಂಗಲ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಕ್ಕಳ ಮೇಲೆ ದಾಳಿ ಮಾಡಿದ್ದ ಚಿರತೆ ಅರಣ್ಯ ಸಿಬ್ಬಂದಿ ಗುಂಡೇಟಿಗೆ ಬಲಿ

**ಚಿಕ್ಕಮಗಳೂರು:** ಕಾಫಿನಾಡಿನ ತರೀಕೆರೆ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಮಕ್ಕಳ ಮೇಲೆ ದಾಳಿ ಮಾಡಿ ಓರ್ವ ಬಾಲಕಿಯನ್ನ ಬಲಿ ಪಡೆದು ಮತ್ತೊಬ್ಬ ಬಾಲಕನ ಮೇಲೆ ದಾಳಿ ಮಾಡಿದ್ದ ಚಿರತೆ ಅರಣ್ಯ ಇಲಾಖೆಯ ಕಾರ್ಯಾಚರಣೆ ವೇಳೆ ಸಾವನ್ನಪ್ಪಿದೆ ಜೀವಂತ ಅಥವಾ ಜೀವ ರಹಿತವಾಗಿ ಹಿಡಿಯಲು ಆದೇಶಿಸಲಾಗಿತ್ತು. ಚಿರತೆ ಸೆರೆಗಾಗಿ ಸಿಬ್ಬಂದಿಗಳು ತೆರಳಿದ್ದ ವೇಳೆ ದಾಳಿಗೆ ಯತ್ನಿಸಿದ್ದು, ಗುಂಡು ಹಾರಿಸಿ ಚಿರತೆ ಹತ್ಯೆ ಮಾಡಲಾಗಿದೆ. ರಸ್ತೆಗಳಲ್ಲಿ ಕಾಣಿಸುತ್ತಿದ್ದ ಚಿರತೆ ತರೀಕೆರೆ ಅರಣ್ಯ ವ್ಯಾಪ್ತಿಯ ನವಿಲೇಕಲ್ಲು ಗುಡ್ಡದ ಬಳಿ ಕಾರ್ಮಿಕರ ಲೈನ್ ಮನೆಯ ಹಿಂಭಾಗ ಆಟವಾಡುತ್ತಿದ್ದ 5 ವರ್ಷದ ಸಾನ್ವಿಯನ್ನು ಅಪ್ಪನ ಎದುರೆ ಹೇಳಿದುಕೊಂಡು ಹೋಗಿ ಗುಡ್ಡದ ಮೇಲೆ ಕೊಂದು ಹಾಕಿತ್ತು ಈ ಪ್ರಕರಣ ಮಾಸುವ ಮುನ್ನವೇ ತರೀಕೆರೆ ತಾಲೂಕಿನ ಬೈರಾಪುರ ಗ್ರಾಮದ ಬಳಿ ಸಂಜೆ ಶಾಲೆಯಿಂದ ಮನೆಗೆ ಬರುತ್ತಿದ್ದ 11 ವರ್ಷದ ಬಾಲಕ ಹೃದಯ್ ಮೇಲೆ ದಾಳಿ ಮಾಡಿ ಕುತ್ತಿಗೆ ಭಾಗಕ್ಕೆ ಬಾಯಿ ಹಾಕಿ ಎಳೆದುಕೊಂಡು ಹೋಗಲು ಪ್ರಯತ್ನಿಸಿತ್ತು. ಆದರೆ ಅದೃಷ್ಟವಶಾತ್ ಹೃದಯ್ ಪಾರಾಗಿದ್ದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಮಕ್ಕಳ ಮೇಲೆ ಹೆಚ್ಚು ದಾಳಿ ಮಾಡುವ ಚಿರತೆ ಸೆರೆಗೆ ನಿನ್ನೆ ತರೀಕೆರೆ ತಾಲೂಕಿನ ಬೈರಾಪುರ ಗ್ರಾಮದಲ್ಲಿ ಕಾರ್ಯಚರಣೆ ನಡೆಸಲು ಅರಣ್ಯ ಇಲಾಖೆ ಪ್ಲಾನ್ ಮಾಡಿತ್ತು. ಕಾರ್ಯಚರಣೆಗಾಗಿ ಕುಮ್ಕಿ ಆನೆಗಳನ್ನ ಕರೆಸಿತ್ತು. ಆದರೆ ಬೈರಾಪುರ ಬಳಿ ಓಡಾಟ ನಡೆಸುತ್ತಿದ್ದ ಚಿರತೆ ಕಾರ್ಯಚರಣೆ ವೇಳೆ ಸಾವನ್ನಪ್ಪಿದೆ.

ಬೈರಾಪುರ ಗ್ರಾಮದ ಹೊರವಲಯದ ಪಾಳು ಬಿದ್ದ ಲೈನ್ನಲ್ಲಿ ಅಡಗಿ ಕುಳಿತಿದ್ದ ಚಿರತೆ ಸೆರೆಗಾಗಿ ಸಿಬ್ಬಂದಿಗಳು ತೆರಳಿದ್ದಾಗ ಚಿರತೆ ದಾಳಿಗೆ ಯತ್ನಿಸಿದೆ. ಹೀಗಾಗಿ ಅರಣ್ಯ ಸಿಬ್ಬಂದಿ ತಮ್ಮ ಆತ್ಮರಕ್ಷಣೆಗಾಗಿ ಚಿರತೆಗೆ ಗುಂಡು ಹಾರಿಸಿದ್ದಾರೆ. ಇನ್ನು ಮಕ್ಕಳ ಮೇಲೆ ದಾಳಿ ಮಾಡುತ್ತಿದ್ದ ಚಿರತೆಯನ್ನು ಜೀವಂತ ಅಥವಾ ಜೀವರಹಿತವಾಗಿ ಹಿಡಿಯಲು ಸಚಿವ ಈಶ್ವರ್ ಖಂಡ್ರೆ ಸೂಚನೆ ನೀಡಿದ್ದರು. ಚಿಕ್ಕಮಗಳೂರು ತಾಲೂಕಿನ ಅಜ್ಜಂಪುರದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ಮಾಡಿದ್ದ ಸಚಿವ ಖಂಡ್ರೆ, ದಾಳಿ ಮಾಡುವ ಚಿರತೆಗಳ ಸೆರೆಗೆ ಸೂಚನೆ ನೀಡಿದ್ದರು. ನವಿಲೇಕಲ್ಲು ಗುಡ್ಡ, ಬೈರಾಪುರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ 10ಕ್ಕೂ ಬೋನ್ ಅಳವಡಿಸಿದ್ದರು. ಆದರೆ ಬೋನಿಗೆ ಬೀಳದ ಚಾಲಾಕಿ ಚಿರತೆ ಆತಂಕ ಸೃಷ್ಟಿ ಮಾಡಿತ್ತು.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

# 6.60 ಕೋಟಿ ಮೌಲ್ಯದ ಗಾಂಜಾ ಸೀಜ್



**ಬೀದರ್**: ಹೈದ್ರಾಬಾದ್-ಮುಂಬೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಗಾಂಜಾ ಸಾಗಾಟ ಮಾಡುತ್ತಿದ್ದ ಲಾರಿಯನ್ನು ತಡೆದು ಬೀದರ್ ಜಿಲ್ಲಾ ಪೊಲೀಸರು 6.60 ಕೋಟಿ ರೂಪಾಯಿ ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಆಧಾರದ ಮೇಲೆ ಬಸವಕಲ್ಯಾಣ ಉಪವಿಭಾಗದ ಡಿವೈಎಸ್‌ಪಿ ಮಡೋಳಪ್ಪ ಅವರ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಗುಪ್ತಚರ ಮಾಹಿತಿ ಪ್ರಕಾರ ಆಂಧ್ರಪ್ರದೇ ಶದಿಂದ ಮಹಾರಾಷ್ಟ್ರಕ್ಕೆ ಭಾರೀ ಪ್ರಮಾಣದ ಗಾಂ ಜಾ ಸಾಗಾಟ ವಾಗುತ್ತಿದೆ ಎಂಬ ಸುಳಿವು ದೊರೆತಿತ್ತು. ಈ ಹಿನ್ನೆಲೆ ಯಲ್ಲಿ ಹೈದ್ರಾಬಾದ್-ಮುಂಬೈ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 50ರಲ್ಲಿ ಬೀದರ್ ಜಿಲ್ಲೆ ಯ ಹುಮನಾಬಾದ್ ಬ ಳಿ ಯ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ಬಲೆ ಬೀಸಿದ್ದರು.

ಗಾಂಜಾ ಸಾಗಾಟ ಮಾಡುತ್ತಿದ್ದ ಲಾರಿಯನ್ನು ತಪಾಸಣೆಗೆ ತಡೆದಾಗ ಆರೋಪಿಗಳು ತಪ್ಪಿಸಿಕೊಳ್ಳಲು ಲಾರಿಯಲ್ಲಿ ಮೊಟ್ಟೆ ಲೋಡ್ ಇದೆ ಎಂದು ತಿಳಿಸಿದ್ದರು. ಆದರೆ ಪೊಲೀಸರು ಸಂಪೂರ್ಣ ತಪಾಸಣೆ ನಡೆಸಿದಾಗ ದುಬಾರಿ ಮೌಲ್ಯದ ಗಾಂಜಾ ಪತ್ತೆಯಾಗಿದೆ. ಮೊಟ್ಟೆಗಳ ಕಾರ್ಟನ್‌ಗಳ ನಡುವೆ ವಿಶೇಷವಾಗಿ ತಯಾರಿಸಿದ ಗೂಡುಗಳಲ್ಲಿ ಗಾಂಜಾ ಪೊಟ್ಟಣಗಳನ್ನು ತುಂಬಿ, ವಾಸನೆ ಹೊರಬರದಂತೆ ಗಾಂಜಾ ಸಾಗಾಟ ಮಾಡುತ್ತಿದ್ದರು. ಲಾರಿಯನ್ನು ಸಂಪೂರ್ಣ ಪರಿಶೀಲಿಸಿದಾಗ 6 ಕ್ವಿಂಟಾಲ್ 60 ಕೆ.ಜಿ. ಗಾಂಜಾ ಪತ್ತೆಯಾಯಿತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಮೌಲ್ಯ ಸುಮಾರು 6.60 ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿದೆ. ಈ ಗಾಂಜಾ ಆಂಧ್ರಪ್ರದೇಶದಿಂದ ಮುಂಬೈ ಮತ್ತು ಪುಣೆ ಸೇರಿದಂತೆ ಮಹಾರಾಷ್ಟ್ರದ ವಿವಿಧ ನಗರಗಳಿಗೆ ಸಾಗಾಟವಾಗುತ್ತಿತ್ತು.

ಈ ದಾಳಿಯಿಂದ ಬೀದರ್ ಜಿಲ್ಲೆಯಲ್ಲಿ ಗಾಂಜಾ ಸಾಗಾಟದ ದೊಡ್ಡ ಜಾಲಕ್ಕೆ ತೀವ್ರ ಆಘಾತವಾಗಿದೆ. ಪೊಲೀಸರು ಲಾರಿ ಚಾಲಕ ಮತ್ತು ಕ್ಲೀನರ್ ಸೇರಿದಂತೆ ಬೀದರ್ ಜಿಲ್ಲೆಯ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳು ಬೀದರ್ ಮೂಲದವರೇ ಆಗಿದ್ದು, ಇವರು ಈ ಹಿಂದೆಯೂ ಗಾಂಜಾ ಸಾಗಾಟದಲ್ಲಿ ಭಾಗಿಯಾಗಿದ್ರಾ..? ಎಂಬ ಶಂಕೆ ವ್ಯಕ್ತವಾಗಿದೆ. ಆರೋಪಿಗಳಿಂದ ಲಾರಿ ಮತ್ತು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಡಿವೈ ಎಸ್‌ಪಿ ಮಡೋಳಪ್ಪ ಅವರ ನೇತೃತ್ವದಲ್ಲಿ ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಸೇರಿದಂತೆ ತಂಡ ಸದಸ್ಯರು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಆರೋಪಿಗಳಿಂದ ಇನ್ನಷ್ಟು ಮಾಹಿತಿ ಪಡೆಯಲಾಗುತ್ತಿದ್ದು, ಈ ಜಾಲದಲ್ಲಿ ಇತರರಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ, ತನಿಖೆ ಪ್ರಾರಂಭಿಸಿದ್ದಾರೆ.

# ನ್ಯಾಷನಲ್ ಹೆರಾಲ್ಡ್ ಪ್ರಕರಣ: ಸೋನಿಯಾ ಗಾಂಧಿ, ರಾಹುಲ್ ಗಾಂಧಿ ವಿರುದ್ಧ ಹೊಸ ಎಫ್‌ಐಆರ್



**ನವದೆಹಲಿ**:ಕಾಂಗ್ರೆಸ್‌ನಹಿರಿಯ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ನ್ಯಾಷನಲ್ ಹೆರಾಲ್ಡ್ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗ (EOW) ಹೊಸ ಎಫ್‌ಐಆರ್ ದಾಖಲಿಸಿದೆ. ಕ್ರಿಮಿನಲ್ ಪಿತೂರಿ, ವಿಶ್ವಾಸಘಾತುಕತೆ ಮತ್ತು ಅಕ್ರಮ ಹಣ ವರ್ಗಾವಣೆ ಆರೋಪಗಳಡಿ ಈ ಪ್ರಕರಣ ದಾಖಲಾಗಿದೆ ಅಕ್ಟೋಬರ್ 3, 2025ರಂದು ದಾಖಲಾದ ಈ ಎಫ್‌ಐಆರ್‌ನಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಜೊತೆಗೆ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ, ಮೋತಿಲಾಲ್ ವೋರಾ (ಮೃತ), ಆಸ್ಕಾರ್ ಫರ್ನಾಂಡಿಸ್ (ಮೃತ), ಸುಮೀರ್ ಗಾಂಧಿ ಸೇರಿದಂತೆ ಒಟ್ಟು ಆರು ವ್ಯಕ್ತಿಗಳು ಮತ್ತು ಮೂರು ಕಂಪನಿಗಳನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ. ಕಂಪನಿಗಳೆಂದರೆ: ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (AJL), ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ (YI) ಮತ್ತು ಡೋಟೆಕ್ಸ್ ಮರ್ಚಂಡೈಸ್ ಪ್ರೈವೇಟ್ ಕಾಂಗ್ರೆಸ್ ಪಕ್ಷವು ಎಜೆಎಲ್‌ಗೆ 90.21 ಕೋಟಿ ರೂಪಾಯಿ ಬಡ್ಡಿಹಿಣ ಸಾಲ ನೀಡಿತ್ತು. ಆ ನಂತರ ಈ ಸಾಲವನ್ನು ಕೇವಲ 50 ಲಕ್ಷ ರೂಪಾಯಿಗೆ ಯಂಗ್ ಇಂಡಿಯನ್ ಕಂಪನಿಗೆ ವರ್ಗಾಯಿಸಲಾಯಿತು. ಯಂಗ್ ಇಂಡಿಯನ್‌ನಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಒಟ್ಟಾರೆ ಶೇ.76 ಷೇರು ಹೊಂದಿದ್ದರು. ಈ ರೀತಿ 90 ಕೋಟಿ ಸಾಲಕ್ಕೆ ಬದಲಾಗಿ ಸುಮಾರು 2,000 ಕೋಟಿ ರೂಪಾಯಿ ಮೌಲ್ಯದ ಎಜೆಎಲ್‌ನ ಭೂಮಿ-ಕಟ್ಟಡ ಸ್ವತ್ತುಗಳನ್ನು ಯಂಗ್ ಇಂಡಿಯನ್ ತನ್ನ ವಶಕ್ಕೆ ತೆಗೆದುಕೊಂಡಿತು ಎಂಬುದು ಆರೋಪವಾಗಿದೆ.

ಜಾ ರಿ ನಿರ್ದೇಶನಾಲಯ (ED) ಈಗಾಗಲೇ 2021ರಿಂದ ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ ತನಿಖೆ ನಡೆಸುತ್ತಿದೆ. ಏಪ್ರಿಲ್ 2025ರಲ್ಲಿ ಇಡಿ ತನ್ನ ಮೊದಲ ಚಾರ್ಜ್‌ಶೀಟ್ ಸಲ್ಲಿಸಿತ್ತು. ಈಗ ಇಡಿಯ ತನಿಖಾ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ದೆಹಲಿ ಪೊಲೀಸರ ಇಒಡಬ್ಲ್ಯೂ ವಿಭಾಗವು ಐಪಿಸಿ ಸೆಕ್ಷನ್ 120B (ಕ್ರಿಮಿನಲ್ ಪಿತೂರಿ), 420 (ವಂಚನೆ), 406 (ವಿಶ್ವಾಸಘಾತುಕತೆ) ಸೇರಿದಂತೆ ಗಂಭೀರ ಕಲಂಗಳಡಿ ಪ್ರಕರಣ ದಾಖಲಿಸಿದೆ. ಪ್ರಕರಣದ ಹಿನ್ನೆಲೆ

2010ರಲ್ಲಿ ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ ಎಂಬ ಸೆಕ್ಷನ್-8 (ಲಾಭರಹಿತ) ಕಂಪನಿ ರಚನೆಯಾಯಿತು. ಈ ಕಂಪನಿಯು ಎಜೆಎಲ್‌ನ 90.21 ಕೋಟಿ ಸಾಲವನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡು ನಂತರ ಎಜೆಎಲ್‌ನ 99% ಷೇರು ಗಳನ್ನು ಸ್ವಾಧೀನಪ ಡಿಸಿಕೊಂಡಿತು. ಫಲಿತಾಂಶವಾಗಿ ದೆಹಲಿ, ಮುಂಬೈ, ಲಕ್ನೋ, ಭೋಪಾಲ್ ಸೇರಿದಂತೆ ದೇಶದ ವಿವಿಧೆಡೆ ಇರುವ ಸುಮಾರು 2,000 ಕೋಟಿ ಮೌಲ್ಯದ ರಿಯಲ್ ಎಸ್ಟೇಟ್ ಆಸ್ತಿಗಳು ಯಂಗ್ ಇಂಡಿಯನ್ ವಶವಾದವು ಎಂಬುದು ತನಿಖಾ ಏಜೆನ್ಸಿಗಳ ಆರೋಪವಾಗಿದೆ.

ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ 2012ರಲ್ಲೇ ಈ ವ್ಯವಹಾರದಲ್ಲಿ ವಂಚನೆ ಆಗಿದೆ ಎಂದು ದೂರು ಸಲ್ಲಿಸಿದ್ದರು. 2014ರ ಜೂನ್‌ನಲ್ಲಿ ದೆಹಲಿಯ ಪಟಿಯಾಲಾ ಹೌಸ್ ನ್ಯಾಯಾಲಯವು ತನಿಖೆಗೆ ಆದೇಶಿಸಿತ್ತು. ಅದೇ ದೂರಿನ ಆಧಾರದ ಮೇಲೆ ಇಂದಿಗೆ 13 ವರ್ಷಗಳ ನಂತರ ದೆಹಲಿ ಪೊಲೀಸರು ಸ್ವತಃ ಎಫ್‌ಐಆರ್ ದಾಖಲಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಈ ಎಫ್‌ಐಆರ್ ಅನ್ನು ರಾಜಕೀಯ ದ್ವೇಷದಿಂದ ಪ್ರೇರಿತ ಎಂದು ಕರೆದಿದ್ದಾರೆ. ಈ ಮಾತನಾಡಿರುವ ಪಕ್ಷದ ವಕ್ತಾರ ರಣದೀಪ್ ಸುರ್ಜೇವಾಲಾ, ಈ ಪ್ರಕರಣದಲ್ಲಿ ಯಾವುದೇ ಹಣ ವರ್ಗಾವಣೆ ಆಗಿಲ್ಲ, ಯಾವುದೇ ನಷ್ಟವೂ ಆಗಿಲ್ಲ. ಇದು ಸಂಪೂರ್ಣ ರಾಜಕೀಯ ಪಿತೂರಿ ಎಂದಿದ್ದಾರೆ.

ಈ ಪ್ರಕರಣದಲ್ಲಿ ಇದುವರೆಗೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಇಬ್ಬರೂ ಇಡಿ ವಿಚಾರಣೆಗೆ ಹಾಜರಾಗಿದ್ದಾರೆ. ಇದೀಗ ದೆಹಲಿ ಪೊಲೀಸರ ಎಫ್‌ಐಆರ್‌ನಿಂದ ಪ್ರಕರಣಕ್ಕೆ ಹೊಸ ಆಯಾಮ ನೀಡಿದೆ.

# ಹಿರಿಯ ನಟ ಎಂ.ಎಸ್. ಉಮೇಶ್ ಇನ್ನಿಲ್ಲ: ಅನಾರೋಗ್ಯದಿಂದ ನಿಧನ



ಹಾಸ್ಯ ಕಲಾವಿದ ಎಂ.ಎಸ್. ಉಮೇಶ್ ಅವರು ಇಹಲೋಕ ತ್ಯಜಿಸಿದ್ದಾರೆ. ಕನ್ನಡ ಚಿತ್ರರಂ ಗದಲ್ಲಿ ಹಿರಿಯ ನಟನಾಗಿ ಅವರು ಕಲಾಸೇವೆ ಮಾಡಿದ್ದರು. 1960ರಿಂದಲೂ ಅವರು ಸಿನಿಮಾಗಳಲ್ಲಿ ನಟಿಸುತ್ತಿದ್ದರು. 80ನೇ ವಯಸ್ಸಿನಲ್ಲಿ ಕೂಡ ಅವರು ಸಿನಿಮಾಗಳಲ್ಲಿ ಅಭಿನಯಿಸುತ್ತ ಕುಟುಂಬಕ್ಕೆ ಆಧಾರ ಆಗಿದ್ದರು. ಎಂ.ಎಸ್. ಉಮೇಶ್ ಅವರದ್ದು ಸ್ವಾಭಿಮಾನದ ಬದುಕು. ಅಲ್ಲದೇ, ಜೀವನದಲ್ಲಿ ಅವರು ತೃಪ್ತಿ ಕಂಡಿದ್ದರು. ಎಷ್ಟು ಇದೆಯೋ ಅಷ್ಟರಲ್ಲೇ ನೆಮ್ಮದಿಯ ಜೀವನ ಮಾಡುವುದು ಹೇಗೆ ಎಂಬುದನ್ನು ಅವರು ಅರಿತಿದ್ದರು. ಆ ಬಗ್ಗೆ ಒಂದಷ್ಟು ತಿಂಗಳ ಹಿಂದೆ ಅವರು 'ಟಿವಿ9' ಜೊತೆ ಮಾತನಾಡಿದ್ದರು.

'ಸರ್ಕಾರವೇ ಸಹಾಯ ಮಾಡಲಿ ಅಂತ ನಿರೀಕ್ಷಿಸುವುದು ತಪ್ಪಾಗುತ್ತದೆ. ಯಾಕೆಂದರೆ, ಪ್ರತಿಯೊಬ್ಬರಿಗೂ ದುಡಿಯುವ ಚೈತನ್ಯ ಕೊಟ್ಟಿರುತ್ತಾರೆ. ನಾನು ಕೂಡ ಯಾರಿಂದಲೂ ಅಪೇಕ್ಷೆಪಡಲ್ಲ. ಯಾರಾದರೂ ಸುಮ್ಮನೆ ದುಡ್ಡುಕೊಟ್ಟರೆ ನಾನು ಪಡೆಯಲ್ಲ. ನಮ್ಮಿಂದ ಏನಾದರೂ ಕೆಲಸ ಆಗಬೇಕಾದರೆ ನಾನು ಮಾಡುತ್ತೇನೆ. ಯಾಕೆಂದರೆ, ಕಲಾವಿದರು ಯಾವಾಗಲೂ ಸ್ವಾಭಿಮಾನಿಗಳು. ಕೆಲಸ ಮಾಡಿ ದುಡ್ಡು ಕೇಳುತ್ತೇವೆ. ಕೆಲಸ ಮಾಡದೆಯೇ ಕೈ ಚಾಚಲ್ಲ' ಎಂದಿದ್ದರು ಎಂ.ಎಸ್. ಉಮೇಶ್.

ನಾವು ಸರ್ಕಾರವನ್ನು ದೂಷಿಸುವುದು ತಪ್ಪು. ಕೋಟ್ಯಂತರ ಜನರ ಸಮಸ್ಯೆಯನ್ನು ಸರ್ಕಾರದವರು ಬಗೆಹರಿಸುತ್ತಾ ಇರುತ್ತಾರೆ. ನಮಗೆ ಯಾಕೆ ಸಹಾಯ ಮಾಡಿಲ್ಲ ಅಂತ ಕೇಳಿದರೆ ಅದು ತಮ್ಮ ತಪ್ಪಾಗುತ್ತದೆ. ರಂಗಭೂಮಿಯಲ್ಲಿ ನಾನು ಬಹಳ ವರ್ಷ ಕೆಲಸ ಮಾಡಿದ್ದರಿಂದ ನನಗೆ 2 ಸಾವಿರ ರೂಪಾಯಿ ಪೆನ್ಷನ್ ಬರುತ್ತದೆ. ನನಗೆ ಅಷ್ಟು ಸಾಕು. ಯಾವುದಾದರೂ ಸಿನಿಮಾದ ಅವಕಾಶ ಸಿಕ್ಕಿದರೆ ಸಾಕು' ಎಂದು ಉಮೇಶ್ ಅವರು ಹೇಳಿದ್ದರು. ಮನುಷ್ಯನಿಗೆ ತೃಪ್ತಿ ಇರಬೇಕು. ಭಗವಂತ ನಮಗೆ ತೃಪ್ತಿ ಕೊಟ್ಟಿದ್ದಾನೆ. ನಾವು ಇರುವುದೇ ಮೂರು ಜನ. ನನ್ನ ಮಗಳು, ಪತ್ನಿ ಮತ್ತು ನಾನು. ಎಲ್ಲರೂ ನಮಗೆ ಆಸರೆಯಾಗಿ ಇದ್ದಾರೆ. ನಾವು ಅದ್ದೂರಿಯಾಗಿ ವೈಭವದ ಜೀವನ ಮಾಡಿಲ್ಲ. ನನ್ನ ಬಳಿ ಕಾರು ಕೂಡ ಇಲ್ಲ. ಕಾರು ಇಟ್ಟುಕೊಂಡರೆ ಅಲ್ಲಿ ಹೋಗಬೇಕು, ಇಲ್ಲಿ ಹೋಗಬೇಕು ಎನಿಸುತ್ತದೆ. ನನಗೆ ಯಾವ ಆಸೆ ಕೂಡ ಇಲ್ಲ. ಭಗವಂತ

ಈ ಮಟ್ಟಿಗೆ ಇಟ್ಟಿದ್ದಾನೆ. ಸಾಕು ನನಗೆ. ಕರ್ನಾಟಕದಲ್ಲಿ ಎಲ್ಲೇ ಹೋದರೂ ಜನರು ಪ್ರೀತಿಸುತ್ತಾರೆ ಅದಕ್ಕಿಂತ ದೊಡ್ಡ ಆಸೆ ಯಾವುದೂ ಬೇಡ' ಎಂದಿದ್ದರು ಉಮೇಶ್. ಇತ್ತೀಚೆಗೆ ಉಮೇಶ್ ಅವರು ಸ್ನಾನದ ಮನೆಯಲ್ಲಿ ಕಾಲು ಜಾರಿ ಬಿದ್ದಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿ ಪರೀಕ್ಷೆ ಮಾಡಿದಾಗ 4ನೇ ಹಂತದ ಕ್ಯಾನ್ಸರ್ ಇರುವುದು ಗೊತ್ತಾಯಿತು. ಚಿಕಿತ್ಸೆ ಕೊಡಿಸಲಾಯಿತಾದರೂ ಕೂಡ ಅವರು ಬದುಕಿ ಉಳಿಯಲಿಲ್ಲ. ಅವರ ಅಗಲಿಕೆಯಿಂದ ಕುಟುಂಬಕ್ಕೆ, ಆಪ್ತರಿಗೆ ಹಾಗೂ ಅಭಿಮಾನಿಗಳಿಗೆ ತೀವ್ರ ನೋವಾಗಿದೆ. ಅವರನ್ನು ಕಳೆದುಕೊಂದು ಚಿತ್ರರಂಗಕ್ಕೆ ನಷ್ಟ ಆಗಿದೆ.

# ಸಾಮೂಹಿಕ ವಿವಾಹ ವೇದಿಕೆಯಲ್ಲೇ ಮಧ್ಯಪ್ರದೇಶ ಸಿಎಂ ಪುತ್ರನ ಮದುವೆ



**ಭೋಪಾಲ್**: ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರ ಪುತ್ರ ಸಾಮೂಹಿಕ ವಿವಾಹ ಸಮಾರಂಭದಲ್ಲೇ ತಾನೂ ಮದುವೆಯಾಗಿ ಸರಳತೆ ಮೆರೆಯಲು ಸಜ್ಜಾಗಿದ್ದಾರೆ. ಉದ್ಯಮಿಗಳು, ರಾಜಕಾರಣಿಗಳ ಮಕ್ಕಳ ಮದುವೆಯೆಂದರೆ ಅದ್ದೂರಿ, ಆಡಂಬರದಿಂದ ಕೂಡಿರುತ್ತೆ ಎಂಬ ವ್ಯಾಖ್ಯಾನಗಳಿವೆ. ಆದರೆ, ಸಿಎಂ ಪುತ್ರರೊಬ್ಬರು ಯಾವುದೇ ಆಡಂಬರವಿಲ್ಲದೇ ಸಾಮೂಹಿಕ ವಿವಾಹ ಸಮಾರಂಭದಲ್ಲೇ ತಾವೂ ಹಸೆಮಣೆ ಏರಲಿದ್ದಾರೆ. ಬಡವರು ಮತ್ತು ಸರಳ ಜೀವಿಗಳು ಸಾಮೂಹಿಕ ವಿವಾಹದಂತಹ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಅದೇ ಹಾದಿಯಲ್ಲಿ ಸಿಎಂ ಪುತ್ರ ಸಾಗಿದ್ದಾರೆ. ಸಿಎಂ ಮೋಹನ್ ಯಾದವ್ ಅವರ ಕಿರಿಯ ಪುತ್ರ ಅಭಿಮನ್ಯು ಯಾದವ್ ಅವರು ಇಶಿತಾ ಯಾದವ್ ಜೊತೆಗೆ ಹಸೆಮಣೆ ಏರಲಿದ್ದಾರೆ. ಸನ್ವಾರಾ ಖೇಡಿಯಲ್ಲಿ ಇತರ 21 ಜೋಡಿಗಳೊಂದಿಗೆ ಸಾಮೂಹಿಕ ವಿವಾಹ ಸಮಾರಂಭದ ಭಾಗವಾಗಿ ವಿವಾಹವಾಗಲಿದ್ದಾರೆ. ಸಿಎಂ ಪುತ್ರನ ಸರಳತೆ ಜನರ ಗಮನ ಮತ್ತು ಪ್ರೀತಿಯನ್ನು ಸೆಳೆದಿದೆ.

ಎಲ್ಲಾ 22 ಜೋಡಿಗಳು ಸಾಮೂಹಿಕ ಮೆರವಣಿಗೆಯಲ್ಲಿ ಸೇರುತ್ತಾರೆ. ವರರು ಕುದುರೆಗಳ ಮೇಲೆ ಮತ್ತು ಅವರ ವಧುಗಳು ಸುಂದರವಾಗಿ ಅಲಂಕರಿಸಲ್ಪಟ್ಟ ಬಂಡಿಗಳಲ್ಲಿ ಬರುತ್ತಾರೆ. ಅವರ ಕುಟುಂಬಗಳು ಬ್ಯಾಂಡ್‌ಗಳ ಜೊತೆಗೆ ನೃತ್ಯ ಮಾಡುತ್ತಾರೆ. ಸ್ನೇಹಿತರು, ಕುಟುಂಬಸ್ಥರು, ಹಿತೈಷಿಗಳು ಮತ್ತು ಈ ಕಾರ್ಯಕ್ರಮವನ್ನು ವೀಕ್ಷಿಸಲು ಬಯಸುವ ನಾಗರಿಕರು ಸೇರಿದಂತೆ ಸುಮಾರು 25,000 ಜನರು ಭಾಗವಹಿಸುವ ನಿರೀಕ್ಷೆಯಿದೆ.

ಇಂದು ಸಾಮೂಹಿಕ ವಿವಾಹ ಸಮಾರಂಭ ಮುಗಿದ ನಂತರ, ಅಥರ್ವ ಹೋಟೆಲ್‌ನಲ್ಲಿ ಅದ್ದೂರಿ ಸ್ವಾಗತ ಸಮಾರಂಭ ನಡೆಯಲಿದೆ. 11 ರಾಜ್ಯಗಳ ಸಚಿವರು, ಮುಖ್ಯಮಂತ್ರಿಗಳು, ಎಂಟು ರಾಜ್ಯಪಾಲರು ಮತ್ತು ಹಲವಾರು ಗಣ್ಯರು ಭಾಗವಹಿಸಲಿದ್ದಾರೆ.

# ಬೆಮಲ್ ಕಾರ್ಖಾನೆ ಬಳಿ ಹುಲಿ ಓಡಾಟ: ಸ್ಥಳೀಯರಲ್ಲಿ ಹೆಚ್ಚಿದ ಆತಂಕ



**ಮೈಸೂರು**: ಕಳೆದ ಕೆಲ ದಿನಗಳಿಂದ ಮೈಸೂರು ಜಿಲ್ಲೆಯಲ್ಲಿ ಹುಲಿ ಕಾಟ ತಲೆನೋಗಿಸುತ್ತಿದ್ದು, ಇದೀಗ ನಗರದ ಹೊರವಲಯದ ಬೆಮಲ್ (ಭಾರತೀಯ ಭೂಮಿ ಮೆಷಿನರಿ ಲಿಮಿಟೆಡ್) ಕಾರ್ಖಾನೆ ಬಳಿ ಹುಲಿ ಓಡಾಟದ ವಿಡಿಯೋ ವೈರಲ್ ಆಗಿರುವುದು ಜನರಲ್ಲಿ ಭಾರೀ ಆತಂಕವನ್ನು ಮೂಡಿಸಿದೆ. ಮೊಬೈಲ್‌ನಲ್ಲಿ ಸೆರೆಹಿಡಿಯಲ್ಪಟ್ಟ ಈ 30 ಸೆಕೆಂಡ್‌ಗಳ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ಪ್ರಚಾರವಾಗಿದ್ದು, ಬೆಮಲ್ ಸುತ್ತಮುತ್ತಲಿನ ಗ್ರಾಮಸ್ಥರು ಮತ್ತು ಕಾರ್ಖಾನೆ ಕೆಲಸಗಾರರು ಭಯಭೀತರಾಗಿದ್ದಾರೆ.

ನವೆಂಬರ್ 29 ರಂದು ಬೆಮಲ್ ಕಾರ್ಖಾನೆಯ ಆಂತರಿಕ ರಸ್ತೆಯಲ್ಲಿ ರಾಜಾರೋಷವಾಗಿ ಓಡಾಡುತ್ತಿರುವ ಹುಲಿಯ ದೃಶ್ಯವನ್ನು ಒಬ್ಬ ಕೆಲಸಗಾರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದಾರೆ. ಬೆಮಲ್ ಕಾರ್ಖಾನೆಯು ಮೈಸೂರು ನಗರದ ಪಶ್ಚಿಮ ಮೂಲೆಯ ಕೂರ್ಗಳ್ಳಿ ಪ್ರದೇಶದಲ್ಲಿದ್ದು, ಸುತ್ತಲೂ ದಟ್ಟ ಕಾಡು ಮತ್ತು ಕೃಷಿ ಜಮೀನುಗಳಿವೆ.

ಈ ಪ್ರದೇಶದಲ್ಲಿ ಹುಲಿಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿಲ್ಲ ಎಂದು ಜನರು ಭಾವಿಸುತ್ತಿದ್ದರೂ, ಇತ್ತೀಚಿನ ಘಟನೆಗಳು ಆ ತಪ್ಪು ಭ್ರಮೆಯನ್ನು ತೊಡೆದುಹಾಕಿವೆ. ಕಳೆದ ಮೂರು ತಿಂಗಳುಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಹುಲಿ ದಾಳಿಗಳು ಮತ್ತು ಸೈಟಿಂಗ್‌ಗಳು ಹೆಚ್ಚಾಗಿವೆ. ಬಂಡೀಪುರ ಟೈಗರ್ ರಿಸರ್ವ್ ಮತ್ತು ನಾಗರಹೊಳೆ ನ್ಯಾಷನಲ್ ಪಾರ್ಕ್‌ಗೆ ಸಮೀಪದಲ್ಲಿರುವುದರಿಂದ ಹುಲಿಗಳು ನಗರ ಪ್ರದೇಶಗಳಿಗೆ ಬರುತ್ತವೆ.

ಇತ್ತೀಚೆಗೆ ಹುಣಸೂರಿನ ಗೌಡನಕಟ್ಟೆ ಗ್ರಾಮದಲ್ಲಿ ಹುಲಿ ಇಬ್ಬರು ರೈತರ ಮೇಲೆ ದಾಳಿ ನಡೆಸಿತು. ರೈತ ಮಹಾದೇವ (34) ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅರಣ್ಯ ಇಲಾಖೆಯ ಕಾರ್ಯಾಚರಣೆಯಲ್ಲಿ ಹುಲಿಯನ್ನು ಸೆರೆಹಿಡಿದು ಬಿಳಿಗಿರಿರಂಗನ ಬೆಟ್ಟಗಳಲ್ಲಿ ಬಿಟ್ಟದ್ದರು.

ಮತ್ತೊಂದು ಹುಲಿ ಇನ್ನೂ ಅಲ್ಲೇ ಇರಬಹುದು ಎನ್ನಲಾಗುತ್ತಿದೆ. ಸರಗೂರು ತಾಲೂಕಿನ ಹಳೇ ಹೆಗ್ಗುಡಿಲು ಗ್ರಾಮದಲ್ಲಿ ಹುಲಿ ಗೋವುಗಳನ್ನು ಕಚ್ಚಿದ್ದು, ಗ್ರಾಮಸ್ಥರು ಭಯಗೊಂಡು ರಾತ್ರಿ ಹೊರಬಂದು ನಡೆಯುವುದನ್ನು ನಿಲ್ಲಿಸಿದ್ದಾರೆ. ಇದರೊಟ್ಟಿಗೆ ಎಚ್.ಡಿ. ಕೋಟೆಯ ಗ್ರಾಮಗಳಲ್ಲಿ ಹುಲಿ ದಾಳಿಗಳು ಮುಂದುವರಿದ್ದು, ಕ್ಯಾಮೆರಾ ಟ್ರ್ಯಾಪ್‌ಗಳ ಮೂಲಕ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದಂತೆ, ಜಿಲ್ಲೆಯಲ್ಲಿ 50ಕ್ಕೂ ಹೆಚ್ಚು ಹುಲಿಗಳು ಮಾನವ ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಬಂಡೀಪುರದಿಂದ ನಗರದ ಕಡೆಗೆ ಚಲನೆಯಾಗುತ್ತಿರುವ ಹುಲಿಗಳು ಆಹಾರ ಹುಡುಕುವಲ್ಲಿ ರೈತರ ಜಮೀನುಗಳತ್ತ ಆಕರ್ಷಿತರಾಗುತ್ತಿವೆ.

ಅರಣ್ಯ ಇಲಾಖೆಯ ಕ್ರಮಗಳು ಬೆಮಲ್ ಕಾರ್ಖಾನೆಯಲ್ಲಿ ಹುಲಿ ಸೈಟಿಂಗ್ ದೂರುವಿನ ಮೇಲೆ ಮೈಸೂರು ವೈಲ್ಡ್‌ಲೈಫ್ ಡಿವಿಜನಲ್ ಕನ್ಸರ್ವೇಟರ್ ಪರಮೇಶ್ ಅವರು ತಕ್ಷಣ ಕಾರ್ಯಾಚರಣೆ ಆರಂಭಿಸಿದ್ದಾರೆ. ಕಾರ್ಖಾನೆಯ 100 ಎಕರೆ ಪ್ರದೇಶದಲ್ಲಿ 4 ಜೋಡು ಕ್ಯಾಮೆರಾ ಟ್ರ್ಯಾಪ್‌ಗಳನ್ನು ಸ್ಥಾಪಿಸಲಾಗಿದೆ.

ಹುಲಿ ಗುರುತಿಸಿದರೆ, ಬೇಟ್ ಹಾಕಿ ಕಾಗ್‌ಗಳನ್ನು ಇಡುವ ಯೋಜನೆ.

ಸುತ್ತಮುತ್ತಲಿನ ಗ್ರಾಮಗಳಲ್ಲಿ (ಬಾದಗಲಪುರ, ಬೆನ್ನೆಗೆರೆ) ಜಾಗೃತಿ ಅಭಿಯಾನ ನಡೆಸಿ, ರೈತರಿಗೆ ಸಲಹೆ ನೀಡಲಾಗುತ್ತಿದೆ: ರಾತ್ರಿ ಜಮೀನಿಗೆ ಏಕಾಂತವಾಗಿ ಹೋಗಬೇಡಿ, ಮೈನಾ ಹೋರ್ ಬಳಸಿ, ದೂರು ನೀಡಿ.

NTCA (ನ್ಯಾಷನಲ್ ಟೈಗರ್ ಕನ್ಸರ್ವೇಷನ್ ಅಥಾರಿಟಿ) ಮಾರ್ಗಸೂಚಿಗಳ ಪ್ರಕಾರ DNA ಟೆಸ್ಟ್ ಮಾಡಿ ಹುಲಿಯನ್ನು ಗುರುತಿಸುವ ಚಿಂತನೆ.

ಬೆಮಲ್ ಕಾರ್ಖಾನೆಯ ಕೆಲಸಗಾರ ಸುನಿಲ್ ಕುಮಾರ್ ಮಾತನಾಡಿ, ರಾತ್ರಿ ಶಿಫ್ಟ್‌ಗೆ ಹೋಗಲು ಭಯ. ಹುಲಿ ಇಲ್ಲಿ ಕಾಡುತ್ತಿದ್ದರೆ ಏನು ಮಾಡೋದು? ಎಂದು ಹೇಳಿದ್ದಾರೆ. ಗ್ರಾಮಸ್ಥರು ಹುಲಿ ದಾಳಿಗಳಿಗೆ ಪರಿಹಾರವಾಗಿ ಕಮ್ಪನ್‌ಸೇಷನ್ ತ್ವರಿತ ನೀಡಿ ಎಂದು ಆಗ್ರಹಿಸಿದ್ದಾರೆ. ಅರಣ್ಯ ಇಲಾಖೆಯು ಜನರಿಗೆ ಸಲಹೆ ನೀಡಿದೆ: ಹುಲಿ ಕಂಡರೆ ಓಡದಿರಿ, ಧ್ವನಿ ಮಾಡಿ, ಹಿಂದೆ ಹೋಗಿ ದೂರು ನೀಡಿ. ಮೈಸೂರು ಜಿಲ್ಲೆಯಲ್ಲಿ ಹುಲಿ-ಮಾನವ ಸಂಘರ್ಷವನ್ನು ಕಡಿಮೆ ಮಾಡಲು ಕಾಡು, ಕೃಷಿ ಸಮತೋಲನ ಅಗತ್ಯ ಎಂದು ಎಕ್ಸ್‌ಪರ್ಟ್‌ಗಳು ಹೇಳುತ್ತಾರೆ.

ಈ ಘಟನೆಯಿಂದ ಮೈಸೂರು ಜಿಲ್ಲೆಯಲ್ಲಿ ಹುಲಿ ಕಾಟದ ವಿರುದ್ಧ ಜಾಗೃತಿ ಹೆಚ್ಚಾಗಿದ್ದು, ಅರಣ್ಯ ಇಲಾಖೆಯ ಕ್ರಮಗಳು ತ್ವರಿತಗೊಳಿಸಬೇಕು ಎಂದು ಜನರು ಒತ್ತಾಯಿಸುತ್ತಿದ್ದಾರೆ.

# ಮೋದಿ 'ಮನ್ ಕಿ ಬಾತ್'ನಲ್ಲಿ ಕಾರವಾರದ ವಾರ್‌ಶಿಪ್ ಮ್ಯೂಸಿಯಂಗೆ ಮನ್ನಣೆ



ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಆಕಾಶವಾಣಿ ಕಾರ್ಯಕ್ರಮ 'ಮನ್ ಕಿ ಬಾತ್'ನ 128ನೇ ಸಂಚಿಕೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ದಲ್ಲಿರುವ ಭಾರತೀಯ ನೌಕಾಪಡೆಯ ಹೆಮ್ಮೆಯ ಯುದ್ಧನೌಕೆ ಮ್ಯೂಸಿಯಂ ಐಎನ್‌ಎಸ್ ಚಾಪೆಲ್ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ.

ರಾಷ್ಟ್ರಭಕ್ತಿ ಮತ್ತು ಪ್ರವಾಸೋದ್ಯಮವನ್ನು ಒಟ್ಟಿಗೆ ಬೆಳೆಸುವ ಉದ್ದೇಶದಿಂದ ದೇಶದಾದ್ಯಂತ ನೌಕಾಪಡೆಗೆ ಸಂಬಂಧಿಸಿದ ಮ್ಯೂಸಿಯಂಗಳಿಗೆ ಜನರು ಭೇಟಿ ನೀಡಬೇಕೆಂದು ಅವರು ಕರೆ ನೀಡಿದ್ದಾರೆ. ಈ ಪ್ರಸ್ತಾಪದಿಂದ ಕಾರವಾರದ ಈ ವಿಶಿಷ್ಟ ಮ್ಯೂಸಿಯಂ ಮತ್ತೊಮ್ಮೆ ದೇಶದ ಗಮನ ಸೆಳೆದಿದೆ.

ರಷ್ಯಾ ನಿರ್ಮಿತ ಈ ಕ್ಷಿಪಣಿ ದಾಳಿ ನೌಕೆ 1976ರಲ್ಲಿ ವಿಶಾಖಪಟ್ಟಣಂ ನೌಕಾನೆಲೆಗೆ ಸೇರ್ಪಡೆಯಾಗಿತ್ತು. ಸುಮಾರು 375 ಟನ್ ತೂಕದ ಚಾಪೆಲ್ ಗಂಟೆಗೆ 70 ಕಿಲೋಮೀಟರ್ ವೇಗದಲ್ಲಿ ಸಾಗುವ ಶಕ್ತಿ ಹೊಂದಿತ್ತು. ನಾಲ್ಕು ಸ್ಟಿಕ್ಸ್ ಕ್ಷಿಪಣಿಗಳು ಮತ್ತು ಎರಡು ವಾಯು ರಕ್ಷಣಾ ಫಿರಂಗಿಗಳನ್ನು ಹೊತ್ತಿದ್ದ ಈ ನೌಕೆ 4 ಕಿಲೋಮೀಟರ್ ದೂರದಲ್ಲಿರುವ ವೈಮಾನಿಕ ಗುರಿಗಳನ್ನು ಧ್ವಂಸ ಮಾಡಬಲ್ಲದಾಗಿತ್ತು. ಸತತ 29 ವರ್ಷಗಳ ಕಾಲ ಭಾರತೀಯ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದ ಚಾಪೆಲ್ 2005ರಲ್ಲಿ ನಿವೃತ್ತಿಯಾಯಿತು.

ನಿವೃತ್ತಿಯ ನಂತರ ಈ ಯುದ್ಧನೌಕೆಯನ್ನು ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಯಿತು. 2006ರ ಡಿಸೆಂಬರ್ 7ರಂದು ಕಾರವಾರದ ರವೀಂದ್ರನಾಥ ಟ್ಯಾಗೋರ್ ಬೀಚ್‌ನಲ್ಲಿ ಭಾರತದ ಮೊದಲ 'ವಾರ್‌ಶಿಪ್ ಮ್ಯೂಸಿಯಂ' ಆಗಿ ಸಾರ್ವಜನಿಕರಿಗೆ ತೆರೆಯಿತು. ಕರಾವಳಿಯ ಮರಳಿನ ಮೇಲೆ ಸ್ಥಾಪಿತವಾದ ಈ ನೌಕೆ ಇಂದಿಗೂ ತನ್ನ ಭವ್ಯತೆಯನ್ನು ಕಾಪಾಡಿಕೊಂಡಿದೆ.

ಕಳೆದ ಕೆಲವು ವರ್ಷಗಳಲ್ಲಿ ಸುಮಾರು 45 ಲಕ್ಷ ರೂಪಾಯಿ ವೆಚ್ಚದಲ್ಲಿ ನೌಕೆಯ ದೇಹಕ್ಕೆ ಹೊಸ ಬಣ್ಣ, ತುಕ್ಕು ತೆಗೆಯುವಿಕೆ ಮತ್ತು ದುರಸ್ತಿ ಕಾರ್ಯಗಳನ್ನು ಮಾಡಲಾಗಿದೆ. ಪ್ರತಿದಿನ ನೂರಾರು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ. ಕಳೆದ 19 ವರ್ಷಗಳಲ್ಲಿ ಲಕ್ಷಕ್ಕೂ ಹೆಚ್ಚು ಜನರು ಈ ಮ್ಯೂಸಿಯಂ ಭೇಟಿ ನೀಡಿದ್ದಾರೆ.

ನೌಕೆಯ ಒಳಗೆ ಪ್ರವೇಶಿಸಿದ ತಕ್ಷಣ ಸಿಬ್ಬಂದಿ ವಾಸಿಸುತ್ತಿದ್ದ ಕಿರಿದಾದ ಕೊಠಡಿಗಳು, ಊಟದ ಸ್ಥಳ, ಕಾಕ್‌ಪಿಟ್, ಕ್ಷಿಪಣಿ ಉಡಾವಣಾ ವ್ಯವಸ್ಥೆ, ರೇಡಾರ್ ಕೊಠಡಿ ಎಲ್ಲವೂ ಯಥಾಸ್ಥಿತಿಯಲ್ಲಿವೆ. ನೌಕಾಪಡೆಯ ಅಧಿಕಾರಿಗಳು ಮತ್ತು ತರಬೇತಿ ಪಡೆದ ಮಾರ್ಗದರ್ಶಕರು ಪ್ರವಾಸಿಗರಿಗೆ ಆ ನೌಕೆಯ ಇತಿಹಾಸ, 1971ರ ಯುದ್ಧದಲ್ಲಿ ಇಂತಹ ನೌಕೆಗಳ ಪಾತ್ರ, ಹಾಗೂ ಭಾರತೀಯ ನೌಕಾಪಡೆಯ ಶಕ್ತಿಯ ಬಗ್ಗೆ ವಿವರವಾಗಿ ತಿಳಿಸುತ್ತಾರೆ.

# ಆತ್ಮಹತ್ಯೆ ಮಾಡಿಕೊಂಡ 18 ವರ್ಷದ ಯುವತಿ, ಸಾವಿನ ಹಿಂದಿದ್ಯಾ ದೆವ್ವದ ಕಾಟ



**ಚಿಕ್ಕಬಳ್ಳಾಪುರ**: ಆಕೆಗೆ ಇನ್ನೂ ಬಾಳಿ ಬದುಕಬೇಕಾದ ವಯಸ್ಸು. 18 ವರ್ಷಕ್ಕೆ ಆ ಯುವತಿ ಆತ್ಮಹತ್ಯೆ ಮಾಡಿಕೊಂಡು ಸಾವಿನ ಮನೆ ಸೇರಿದ್ದಾಳೆ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮೇಲ್ನೋಟಕ್ಕೆ ಹೊಟ್ಟೆನೋವು ಕಾರಣ ಎನ್ನಲಾಗುತ್ತಿದ್ದು, ಆಕೆಯ ವರ್ತನೆ ಮಾತ್ರ ದೆವ್ವದ ಕಾಟವೇನೋ ಎಂಬ ಅನುಮಾನ ಪೋಷಕರಲ್ಲಿ ಮೂಡುವಂತೆ ಮಾಡಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಬುರಡುಗುಂಟೆ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಅಂಜನಪ್ಪ ಹಾಗೂ ಮಧುಶ್ರಿ ದಂಪತಿಯ ಮಗಳು ಶಾರದಾ ಆತ್ಮಹತ್ಯೆ ಮಾಡಿಕೊಂಡ ಯುವತಿ. ದಂಪತಿಗೆ ಇಬ್ಬರು ಹೆಣ್ಣು ಮಕ್ಕಳು, ಓರ್ವ ಗಂಡು ಮಗನಿದ್ದಾನೆ. ಆದರೆ ಕೆಲ ವರ್ಷಗಳ ಹಿಂದೆ ಶಾರದಾ ತಂದೆ ಅಂಜನಪ್ಪ ಮೃತಪಟ್ಟ ಹಿನ್ನಲೆ, ತಾಯಿ ಮಧುಶ್ರೀ ತನ್ನ ಕಿರಿಯ ಮಗಳು ಶಾರದಾ ಹಾಗೂ ಮಗನೊಂದಿಗೆ ತನ್ನ ಹಿರಿಯ ಮಗಳು ನಾಗಮಣಿಯನ್ನ ಮದುವೆ ಮಾಡಿಕೊಟ್ಟಿದ್ದ ಚಿಕ್ಕಬಳ್ಳಾ ಪುರದ ಕಣಿವೆನಾರಾ ಯಣಪುರದ ಗ್ರಾಮಕ್ಕೆ ಬಂದು ಬಾಡಿಗೆ ಮನೆ ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದರು. ಕಿರಿ ಮಗಳು ಶಾರದಾಗೆ ಪದೇ ಪದೇ ಹೊಟ್ಟೆ ನೋವು. ಎಷ್ಟೇ ಆಸ್ಪತ್ರೆಗಳಿಗೆ ತೋರಿಸಿದರೂ ಯಾವುದೇ ಪ್ರಯೋಜವಾಗಿಲ್ಲ.

ಹೊಟ್ಟೆ ನೋವಿನೊಂದಿಗೆ ಆಗಾಗ ರಕ್ತ ವಾಂತಿ ಆಗುತ್ತಿತ್ತಂತೆ. ಇದಕ್ಕೆಲ್ಲಾ ಶಾರದಾ ಕಳೆದ 4 ವರ್ಷಗಳ ಹಿಂದೆ ಬಿದ್ದಿದ್ದ ಬುರುಡುಗುಂಟೆ ಗ್ರಾಮದ ಬಳಿಯ ಸ್ಮಶಾನದ ಸಮೀಪ ಇರುವ ಮೂರು ದಾರಿಗಳು ಕೂಡುವ ಜಾಗವಂತೆ. ಅದೊಂದು ದಿನ ಶಾರದಾ ಮೂರು ದಾರಿ ಕೂಡುವ ಜಾಗದಲ್ಲಿ ಬಿದ್ದು ಮನೆಗೆ ಬಂದಿದ್ದಳಂತೆ. ಅಂದಿನಿಂದಲೇ ಇದೆಲ್ಲವೂ ಶುರುವಾಗಿದ್ದು, ಯಾವುದೋ ಗಾಳಿ ಸೋಕಿದೆ. ಮಗಳು ಚಿತ್ರ ವಿಚಿತ್ರವಾಗಿ ವರ್ತನೆ ಮಾಡುತ್ತಿದ್ದಳು. ಅದರಿಂದಲೇ ಮಗಳ ಸಾವಾಗಿದೆ ಅಂತ ತಾಯಿ ಮಧುಶ್ರೀ ನೊಂದುಕೊಂಡಿದ್ದಾರೆ.

ಚಿತ್ರ ವಿಚಿತ್ರವಾಗಿ ವರ್ತಿಸುತ್ತಿದ್ದ ಶಾರದಾ ಇನ್ನು ಕಳೆದ 3-4 ವರ್ಷಗಳಿಂದ ಶಾರದಾಗೆ ಹೊಟ್ಟೆ ನೋವಿನ ಸಮಸ್ಯೆ ಇತ್ತು. ಯಾವ ಆಸ್ಪತ್ರೆಗೆ ತೋರಿಸಿದರೂ ರಿಪೋರ್ಟ್‌ಗಳೆಲ್ಲವೂ ನಾರ್ಮಲ್ ಅಂತ ವೈದ್ಯರು ಹೇಳ್ತಿದ್ದರಂತೆ. ಹೀಗಾಗಿ ಶಾರದಾ ತಾಯಿ ಮಗಳು ಗುಣಮುಖಳಾಗಲಿ ಅಂತ ದೇವಸ್ಥಾನಗಳಲ್ಲಿ ವಿಶೇಷ ಪೂಜೆ-ಪುನಸ್ಕಾರಗಳನ್ನ ಮಾಡಿಸಿ ಹರಕೆ ಸಹ ಕಟ್ಟಕೊಂಡಿದ್ದರು. ಮಾಟ-ಮಂತ್ರ ಅಂತ ನಾಟಿ ಔಷಧಿಗಳನ್ನ ಸಹ ಕೊಡಿಸಿದ್ದರಂತೆ. ದೇವರಿಗೆ ಪೂಜೆ ಮಾಡಿಸಿದಾಗ ಕೆಲ ದಿನಗಳು ಹೊಟ್ಟೆ ನೋವು ಇರ್ತಿರಲಿಲ್ಲವಂತೆ. ಆದರೆ ಮತ್ತೆ ಕೆಲ ದಿನಗಳ ನಂತರ ತಡೆಯಲಾರದಷ್ಟು ಹೊಟ್ಟೆ ನೋವು, ಚಿತ್ರ ವಿಚಿತ್ರವಾಗಿ ವರ್ತಿಸುವುದು, ಕೂಗಾಡುವುದು, ರೇಗಾಡುವುದು, ಅರಚೋದು, ಕಿರುಚಾಡುವುದು, ಕೋಪ ಮಾಡಿಕೊಂಡು ಎಲ್ಲರನ್ನ ಗುರಾಯಿಸುವುದು ಮಾಡುತ್ತಿದ್ದಳಂತೆ.

ಹೀಗಾಗಿ ಮಗಳನ್ನ ಕಾಲೇಜಿಗೆ ಹೋಗುವುದನ್ನು ಬಿಡಿಸಿ ಮನೆಯಲ್ಲಿ ಇಟ್ಟುಕೊಂಡಿದ್ದರು. ಹುಷಾರಿಲ್ಲ ಅಂತ ತಾಯಿ ಆಸ್ಪತ್ರೆಗೆ ಹೋಗಿ ಬರುವಷ್ಟರಲ್ಲಿ ಮನೆಯಲ್ಲಿ ಒಬ್ಬಳೇ ಇದ್ದ ಶಾರದಾ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ. ಶಾರದಾ ಆತ್ಮಹತ್ಯೆ ಪ್ರಕರಣ ಸಂಬಂಧ ನಂದಿಗಿರಿಧಾಮ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೃತಳ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೃತದೇಹವನ್ನ ಪೋಷಕರಿಗೆ ಹಸ್ತಾಂತರಿಸಿದ್ದಾರೆ. ಪೊಲೀಸರು ಅನುಮಾನಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.